॥धर्मो रक्षति रक्षितः॥

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. 33 No. 01 NOVEMBER 2023 Pages 16 Rs. 2/-















PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.

# Felicitation to Elderly & Achievers


























Committee Members at Durga Pooja

**"Havyaka Sandesha"** is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098.

| | | |
|---|---|---|
| ***Hon. Editor*** | : | Smt. Amita S. Bhagwat |
| ***Editorial Committee*** | | Smt. Shashikala Hegde<br>Smt. Tanuja Hegde<br>Shri Ganesh Bhat<br>Smt. Shailaja Hegde |
| ***Publisher*** | : | Narayan Akadas R.<br>Hon. Gen. Secretary |
| ***Printed at*** | : | M/s. Navin Printers<br>Mumbai - 400 016.<br>✆ 2430 8316 |


**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2023-2024**

| | | |
|---|---|---|
| ***President*** | : | Shivkumar P. Bhagwat |
| ***Vice - President*** | : | Vishnu Bhagwat |
| ***Hon. Gen. Secretary*** | : | Vasant Bhat |
| ***Hon. Jt. Secretary*** | : | G. V. Hegde |
| ***Hon. Treasurer*** | : | Ganesh Bhat |

***Elected Members :***

| | |
|---|---|
| Narayan Akadas | Umesh Hegde |
| Sanjay Bhat | Prakash Bhat |
| Smt. Tanuja Hegde | Prakash Hegde |
| Smt. Shashikala Hegde | N. K. Hegde |
| Ramana Bhat | |

***Co-opted Members :***
Chandrashekhar Joshi, Nagaraj Bhat

***Editorial***

# A matter of choice



*The ability to remember things is often considered as the yardstick of gauging one's brilliance. We believe that an intelligent person should necessarily have good memory.*

*It is interesting to note that there is nothing like a poor memory because everyone is capable of remembering certain things.There are some who are very good in remembering names while some are good in remembering birth dates. Some are good in remembering places while some are good in remembering faces. In general, people remember things clearly in the area of their interest.*

*Interestingly, our mind tends to remember those things which are essential for the smooth functioning of our life. Students tend to remember all that is in syllabus so that they can fare well. Can anyone fix syllabus for life?Dynamics of the brain work for our betterment.*

*Sometimes we use forgetfulness as an excuse for not doing something. In reality we forget something only when we consider it not important. In that sense it shows casual attitude towards work; 'Selective Amnesia' as it is called.*

*Quite often, memory is also associated with our emotions. Our experiences pleasant or unpleasant, leave an imprint in our mind which we knowingly or unknowingly, recollect from time to time. When we get involved in the present moment, either at work or dealing with other people, with dedication and love we are building up a beautiful memory lane that makes us visit again and again.*

*Good memory may not be always beneficial. When there is an unpleasant experience, it is desirable to forget it. Life is painted with shades of pleasure and pain.Our failures in certain aspects of life, humiliation we have undergone may tend to imprint in our minds. Under such circumstances it is necessary to take extra step to forget it.*

*Moreover, when we advocate forgiveness, forgetting the bitter experience is the first step. Intelligent people suffer a lot as they keep on recollecting their mental suffering.*

*Forgetting something is a matter of choice and should be used prudently because it is very important to remember those who have influenced us positively or helped us in tough times. Gratitude should be a part of our life.*

*Sharp memory can indicate an intelligent person but a wise person knows what to remember and what to forget.*

**Wish you all Happy Deepawali.**

Amita S Bhagwat

e-mail : amitabhagwat@gmail.com

*PAGE DONATED BY :* ***HEGDE HOSPITAL, CHEMBUR,*** *COURTESY :* ***DR. DINESH HEGDE***

# ಮಾಸ ಮಹಾತ್ಮ್ಯ

✍ ಗಣಪತಿ ಭಟ್ಟ

*(ಕಳೆದ ಸಂಚಿಕೆಯಿಂದ)*

ಈ ಕಥಾತಾತ್ಪರ್ಯದ್ಯೋತಕವಾದ ವಾಕ್ಯವು ವೇದದಲ್ಲೂ ಕಂಡು ಬರುತ್ತದೆ. ಅದಿತಿಯಂದರೆ ಆಕಾಶವೆಂತಲೂ, ವಾಮನಾವತಾರಿಯಾದ ವಿಷ್ಣುವೆಂದರೆ ಸೂರ್ಯನೆಂತಲೂ, ವಿಷ್ಣುವು (ಸೂರ್ಯನು) ತನ್ನ ಪಾದ (ಕಿರಣ) ಗಳಿಂದ ವಿಶ್ವವನ್ನೇ ವ್ಯಾಪಿಸಿ ತಮೋಗುಣಪ್ರಧಾನನಾದ ರಾಕ್ಷಸನನ್ನು ಅಂದರೆ ಕತ್ತಲೆಯನ್ನು ಅಟ್ಟುವನೆಂತಲೂ ಇದಕ್ಕೆ ತಾತ್ವಿಕ ಅರ್ಥ ಮಾಡುವರು. ಸ್ವತಃ ಬಲಿಯು ಸಜ್ಜನನಾದರೂ ಅವನ ಪರಿವಾರದವರಾದ ರಾಕ್ಷಸರು ದುರ್ಗುಣಿಗಳಾದ್ದರಿಂದಲೂ, ತನ್ನ ಹಕ್ಕಿನದಲ್ಲದ ದೇವತೆಗಳ ರಾಜ್ಯದ ಮೇಲೆ ಆಸೆ ಮಾಡಿದ್ದರಿಂದಲೂ ಅವನು ಕಷ್ಟಕ್ಕೊಳಗಾಗಬೇಕಾಯಿತು. ಅವನನ್ನು ಶ್ರೀ ವಿಷ್ಣುವು ಭೇದೋಪಾಯದಿಂದ ಗೆದ್ದದ್ದು ರಾಜನೀತಿಯ ಒಂದು ಕ್ರಮವನ್ನು ವ್ಯಕ್ತಪಡಿಸುತ್ತದೆ.

**ಅನಂತ ಚತುರ್ದಶಿ –** ಇದೊಂದು ಹಬ್ಬವಾಗಿರದೆ ಕಾಮ್ಯವ್ರತವಾಗಿರುತ್ತದೆ. ಕುಲಾಚಾರವಿದ್ದವರು ಇದನ್ನು ಆಚರಿಸುವರು. ಈ ವ್ರತದ ಮಹಿಮೆಯನ್ನು ಶ್ರೀ ಕೃಷ್ಣನು ಯುಧಿಷ್ಠಿರನಿಗೆ ಹೇಳಿ ಅವನಿಂದ ಈ ವ್ರತವನ್ನು ಮಾಡಿಸಿದನೆಂದು ಭಾರತದಲ್ಲಿದೆ. ಈ ವ್ರತದ ಪೂಜಾವಿಧಿಗೆ ಪೂರ್ವಾಹ್ನವೇ ಮುಖ್ಯವಾಗಿದೆ. ಕಾರಣ ಪೂರ್ವಾಹ್ನದಲ್ಲಾಗಲಿ, ಮಧ್ಯಾಹ್ನದಲ್ಲಾಗಲಿ ಚತುರ್ದಶಿಯು ಸಿಗತಕ್ಕದ್ದು. ಈ ದಿನ ಜಲಾಶಯಕ್ಕೆ ಹೋಗಿ ಯಮುನೆಯನ್ನು ಪೂಜಿಸಿ ಕಲಶವನ್ನು ತುಂಬಿ ತಂದು ಸುಶೋಭಿತವಾದ ಮಂಟಪದಲ್ಲಿಟ್ಟು ಎರಡು ವಸ್ತ್ರಗಳಿಂದ ವೇಷ್ಟಿಸಿ ಅದರ ಮೇಲೆ ಅನಂತನ ಪ್ರತಿಮೆಯನ್ನಾಗಲಿ, ಸಾಲಿಗ್ರಾಮವನ್ನಾಗಲಿ ಸ್ಥಾಪಿಸಿ ಒಂದು ಮುಷ್ಟಿ ದರ್ಭೆಯಿಂದ ಶೇಷನನ್ನು ತಯಾರಿಸಿಟ್ಟು ಷೋಡಶೋಪಚಾರಗಳಿಂದ ಪೂಜಿಸಬೇಕು. ಹಾಗೂ ಹದಿನಾಲ್ಕು ಗ್ರಂಥಿಗಳುಳ್ಳ ರೇಶಿಮೆಯ ದಾರದಲ್ಲಿ ವಿಷ್ಣು, ಅಗ್ನಿ, ಸೂರ್ಯ, ಇಂದ್ರ, ಬ್ರಹ್ಮ, ವಾಯು, ಈಶ್ವರ, ಗಣೇಶ, ಸ್ಕಂದ, ಚಂದ್ರ, ಆಕಾಶ, ವರಣ, ಪೃಥ್ವೀ, ವಸುಗಳು, ಈ ಕ್ರಮದಿಂದ ದೇವತೆಗಳನ್ನು ಆವಾಹಿಸಿ ಪೂಜಿಸುವುದು. ಹಾಗೂ ಪುರುಷರಾದರೆ ಬಲಗೈಗೂ ಸ್ತ್ರೀಯರಾದರೆ ಎಡಗೈಗೂ ಈ ದಾರವನ್ನು ಕಟ್ಟಿಕೊಳ್ಳುವದು. ರಾತ್ರಿ ಕಥಾಶ್ರವಣ, ನೃತ್ಯಗೀತಗಳನ್ನಾಚರಿಸಿ ಮಾರನೇ ದಿನ ಪುನಃ ಪೂಜೆ ಮಾಡಿ ವ್ರತವನ್ನು ಮುಗಿಸುವುದು. ಈ ಪ್ರಕಾರ ಹದಿನಾಲ್ಕು ವರ್ಷ ವ್ರತಾಚರಣ ಮಾಡಿ ನಂತರ ಉದ್ಯಾಪನೆ ಮಾಡುವದು.

ಈ ವ್ರತದ ಪ್ರಚಾರವು ದಕ್ಷಿಣ ಹಿಂದುಸ್ಥಾನದಲ್ಲಿ ಮುಖ್ಯವಾಗಿ ವೈಷ್ಣವಮತಾನುಯಾಯಿಗಳಲ್ಲಿ ವಿಶೇಷ. ಕೆಲವು ಸ್ಮಾರ್ತರೂ ಇದನ್ನಾಚರಿಸುವರು. ಕೃಷ್ಣಪ್ರೀತ್ಯರ್ಥವಾಗಿಯೆಂದು ಬಂಗಾಲಪ್ರಾಂತದಲ್ಲಿ ಈ ವ್ರತಾಚರಣೆಯಿರುವುದು. ಅಲ್ಲಿ ಅನೇಕ ಪ್ರಕಾರದ ಫಲ, ಮಿಠಾಯಿಗಳನ್ನು ಕೃಷ್ಣನಿಗೆ ಅರ್ಪಿಸುವರು.

ಈ ವ್ರತವು ಎಂದಿನಿಂದ ಪ್ರಾರಂಭವಾಯಿತು? ಇದರ ಉಪಪತ್ತಿಯೇನು? ಮುಂತಾದ ಸಂಗತಿಗಳು ತಿಳಿದುಬರುವದಿಲ್ಲ. 'ಸುಶೀಲೆಯೆಂಬೋರ್ವ ಬ್ರಾಹ್ಮಣ ಸ್ತ್ರೀಯು ಇತರ ಕೆಲವರು ಈ ವ್ರತ ಮಾಡುವದನ್ನು ನೋಡಿ ತಾನೂ ಆಚರಿಸಿದ್ದರಿಂದ ಅವಳು ಕೌಂಡಿಣ್ಯನೆಂಬ ತನ್ನ ಪತಿಯೊಡನೆ ಸುಖಿಯಾದಳು. ಆದರೆ ಕೌಂಡಿಣ್ಯನು ತನ್ನ ಸಂಪತ್ತಿಗೆ ಈ ವ್ರತವು ಕಾರಣವೆಂಬದನ್ನು ನಂಬದೆ ಅವಳು ಕೈಗೆ ಕಟ್ಟಿಕೊಂಡಿದ್ದ ದೋರವನ್ನು ಬಿಚ್ಚಿ ಬೆಂಕಿಯಲ್ಲಿ ಒಗೆದನು. ಇದರಿಂದ ಅವನು ದರಿದ್ರನಾಗಿ ಅಡವಿಯಲ್ಲಿ ಅಲೆದಾಡಬೇಕಾಯಿತು. ಮುಂದೆ ದಯಾಳುವಾದ ಶ್ರೀ ಅನಂತನ ದರ್ಶನವನ್ನು ಪಡೆದು ಈ ವ್ರತವನ್ನಾಚರಿಸಹತ್ತಿ ಸುಖಿಯಾದನು' ಎಂಬುದೇ ಈ ವ್ರತದ ಕಥಾತಾತ್ಪರ್ಯವು.



ಇದೊಂದು ಕಾಮ್ಯವ್ರತವಾಗಿರುತ್ತದೆ. ಈಗಿನ ಕಾಲಕ್ಕೆ ಸತ್ಯನಾರಾಯಣ, ಸತ್ಯಗಣಪತಿ ಇತ್ಯಾದಿ ಕಾಮ್ಯವ್ರತಗಳು ವಿಶೇಷ ಪ್ರಚಾರದಲ್ಲಿರುತ್ತವೆ. ಭಗವದ್ಗೀತೆಯಲ್ಲಿ ನಿಷ್ಕಾಮಕರ್ಮವನ್ನು ಬೋಧಿಸುವ ಶ್ರೀಕೃಷ್ಣನು ಇಂಥ ಕಾಮ್ಯಕರ್ಮವನ್ನುಪದೇಶಿಸಿದನೆಂಬದು ಭಾರತದೊಳಗಿನ ಪ್ರಕ್ಷಿಪ್ತ ಭಾಗವೆಂದು ಕೆಲವರ ಮತವದೆ. ದುರಾಚಾರಿಗಳು ಸಹ ತಮ್ಮ ದುಷ್ಟಹೇತುವನ್ನು ಸಾಧಿಸುವದಕ್ಕಾಗಿ ಇಂಥ ಕಾಮ್ಯವ್ರತಗಳನ್ನಾಚರಿಸಿ ಸುಖಹೊಂದುವವೆಂದು ತಿಳಿಯುವದು ಎಂದೂ ಸಮಂಜಸವಲ್ಲ; ಈ ಭಾವನೆಯು ಹಿಂದೂಧರ್ಮದ ಉದಾತ್ತತತ್ವಕ್ಕೆ ಒಂದು ಕಲಂಕವೇ ಸರಿ. ಇಂಥ ಯಾವದೇ ವ್ರತವಾಗಲಿ ಅನಂತರೂಪಿಯಾದ-ವ್ಯಾಪಕನಾದ-ವಿಷ್ಣುವಿನ ಆರಾಧನೆಯು ಕ್ರಮವೆಂದು ತಿಳಿದು ನಿಷ್ಕಲ್ಮಷಬುದ್ಧಿಯಿಂದ ಅವನ್ನಾಚರಿಸುವದು ಯುಕ್ತವಾಗಿದೆ.

**ಮಹಾಲಯ –** ಈ ಪಕ್ಷದಲ್ಲಿ ಪಿತೃಕಾರ್ಯ ಮಾಡುವದರಿಂದ ಇದಕ್ಕೆ ಪಿತೃಪಕ್ಷವೆಂದೂ ಅನ್ನುವರು. ಶಕ್ತರಾದವರು ಭಾದ್ರಪದ ವದ್ಯ ಪ್ರತಿಪದೆಯಿಂದ ಆರಂಭಿಸಿ 30 ಯವರೆಗೆ 15 ದಿನ (ತಿಥಿವೃದ್ಧಿಯಾದರೆ 16 ದಿನ, ಕ್ಷಯವಾದರೆ 14 ದಿನ) ಶ್ರಾದ್ಧಗಳನ್ನು ಮಾಡತಕ್ಕದ್ದು. ಅಶಕ್ತರಾದವರು ಪಂಚಮಿ, ಷಷ್ಠಿ, ಅಷ್ಟಮಿ, ದಶಮಿ, ಏಕಾದಶಿ ಈ ತಿಥಿಗಳಲ್ಲಿ ಯಾವದೊಂದು ತಿಥಿಯಿಂದ ಪ್ರಾರಂಭಿಸಿ ನಡುವೆ ಚತುರ್ದಶಿ ತಿಥಿಯೊಂದನ್ನು ಬಿಟ್ಟು ಅಮಾವಾಸ್ಯೆಯವರೆಗೆ ಮಹಾಲಯ ಶ್ರಾದ್ಧಗಳನ್ನು ಮಾಡಬಹುದು. ಇದಕ್ಕೂ ಅಶಕ್ತರಾದವರು ಒಂದೇ ದಿನ ನಿಷಿದ್ಧವಲ್ಲದ ದಿನವಾಗಲಿ, ಪಿತೃಮೃತ ತಿಥಿಯ ದಿನವಾಗಲಿ ಮಾಡತಕ್ಕದ್ದು. ಈ ಕಾರ್ಯಕ್ಕೆ ಕೆಲವು ನಿಷಿದ್ಧ ತಿಥಿ-ವಾರ-ನಕ್ಷತ್ರಗಳನ್ನು ಹೇಳಿದ್ದಾರೆ. ಹಾಗೂ ಚತುರ್ದಶಿಯು ಮೃತತಿಥಿಯೇ ಆದರೂ ಶಸ್ತ್ರಾದಿಗಳಿಂದ ಹತರಾದವರ ಹೊರತು ಉಳಿದವರಿಗೆ ಆ ದಿನ ಮಹಾಲಯ ಮಾಡಬಾರದೆಂದು ಹೇಳಿದೆ. ಈ ಪಕ್ಷವು ಕನ್ಯಾಸಂಕ್ರಾಂತಿಯಿಂದ ಕೂಡಿದ್ದಾದರೆ ಪ್ರಶಸ್ತವು. ಅಮಾವಾಸ್ಯೆಯೊಳಗೆ ಮಹಾಲಯ ಮಾಡಲು ತೊಂದರೆಯಾದವರು ಆಶ್ವಿನ ಶು. 5ಯೊಳಗೆ ಮಾಡಬಹುದು; ಅದಕ್ಕೂ ಅನುಕೂಲವಾಗದಿದ್ದರೆ ವೃಶ್ಚಿಕ ಸಂಕ್ರಾಂತಿಯೊಳಗೆ ಸಹ ಮಾಡಬಹುದು; ಇತ್ಯಾದಿ ಕಾಲನಿರ್ಣಯವಿರುತ್ತದೆ. ಇದನ್ನು ವಿಸ್ತಾರವಾಗಿ ಧರ್ಮಸಿಂಧ್ವಾದಿಗ್ರಂಥಗಳಲ್ಲಿ ನೋಡಬಹುದು. ಪಿತೃಗಳು ಜೀವಿಸಿರುವಾಗಲೂ, ಮೃತರಾದ ಮೇಲೂ ಅವರಲ್ಲಿ ಸಂಪೂರ್ಣ ಭಕ್ತಿಯಿಡುವದು ಹಿಂದೂ ಧರ್ಮದ ಒಂದು ನೀತಿ ತತ್ವವಾಗಿರುತ್ತದೆ. ಪಿತೃಗಳಲ್ಲೂ, ವಿಧಿಯಲ್ಲೂ ಶ್ರದ್ಧೆಯಿಟ್ಟು ಮಾಡುವ ದಾದ್ದರಿಂದಲೇ ಶ್ರಾದ್ಧವೆಂಬ ಹೆಸರು ಬಂದಿದೆ.

*(ಮುಂದುವರಿಯುವುದು)*

*PAGE DONATED BY : **SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

# ನಾಕುತಂತಿ ಕವನದ ಶೈಲಿ ಹಾಗೂ ದಾರ್ಶನಿಕತೆ

✍ ಡಾ. ಶೈಲಜಾ ಹೆಗಡೆ, ಮುಂಬಯಿ

ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಉತ್ತುಂಗಕ್ಕೇರಿಸಿದ ಅದ್ಭುತ ಪ್ರತಿಭೆಗಳಲ್ಲಿ ವರಕವಿ ದತ್ತಾತ್ರೇಯ ಬೇಂದ್ರೆಯವರು ಅಗ್ರಗಣ್ಯರು. ಇವರು 'ಶಬ್ದಗಾರುಡಿಗ' ಎಂದೇ ಪ್ರಖ್ಯಾತರು. ತಮ್ಮ ಜೀವನವನ್ನೇ ಕಾವ್ಯೋದ್ಯೋಗವನ್ನಾಗಿಸಿದ ಇವರನ್ನು ಅನುಭಾವಿ ಕವಿಯೆಂದು ಕರೆಯುತ್ತಾರೆ. ಅನುಭವದ ಮೂಸೆಯಲ್ಲಿ ಅದ್ದಿ ತೆಗೆದ ಅವರ, 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ', 'ರಸವೆ ಜನನ, ವಿರಸ ಮರಣ, ಸಮರಸವೇ ಜೀವನ', 'ಮಾತು ಮಾತು ಮಥಿಸಿ ಬಂದ ನಾದದ ನವನೀತ' ಮೊದಲಾದ ಕಾವ್ಯ ನುಡಿಗಟ್ಟುಗಳು ಸಹೃದಯ ರಸಿಕರ ಮನದಲ್ಲಿ ಚಿರಸ್ಥಾಯಿಯಾಗಿವೆ. ವರಕವಿ ಬೇಂದ್ರೆಯವರು ಶ್ರೇಷ್ಠ ಕವಿಗಳಲ್ಲದೆ, ಉತ್ತಮ ದಾರ್ಶನಿಕರು, ಸಂಖ್ಯಾಶಾಸ್ತ್ರ ಪರಿಣತರು, ವಿಜ್ಞಾನವನ್ನು ಚೆನ್ನಾಗಿ ಬಲ್ಲವರು. ಅವರ ಕಾವ್ಯ, ನಾಟಕ, ಪ್ರಬಂಧ, ಕತೆ ಮೊದಲಾದವುಗಳಲ್ಲಿ ನವ ಮಾನವ ದೃಷ್ಟಿಯನ್ನು ಕಾಣಬಹುದು. ಅವರದು ವಿಶ್ವ ಮಾನವ ಸಿದ್ಧಾಂತ. ಸಿದ್ಧಾಂತ ಯಾವತ್ತೂ ಆಚರಣೆಯಲ್ಲಿರಬೇಕೆಂಬುದನ್ನು ಅವರು ನಂಬಿದ್ದರು. ಏಕತೆಯಲ್ಲಿ ಪರಿಪೂರ್ಣತೆ; ಇದು ಅವರ ಚಿಂತನೆಯ ಸಾರವಾಗಿತ್ತು. ಹಾಗಾಗಿಯೇ ಅವರು ವಿಶ್ವಕವಿಯೆಂದು ಪರಿಗಣಿಸಲ್ಪಟ್ಟರು. ಅವರ ವೈಜ್ಞಾನಿಕ ಸಂಶೋಧನೆಗಳೂ ಮಹತ್ವದ ಸ್ಥಾನವನ್ನು ಪಡೆದು ಕೊಂಡಿವೆ.

ವರಕವಿ ಬೇಂದ್ರೆ ಅವರು ಚತುರ್ಭಾಷಾಕೋವಿದರು. ಮರಾಠಿ, ಕನ್ನಡ, ಸಂಸ್ಕೃತ ಹಾಗೂ ಇಂಗ್ಲೀಷ್ ಈ ನಾಲ್ಕು ವಾಙ್ಮಯಗಳಲ್ಲಿ ನಿಷ್ಣಾತರು. ಅವರ ಮಾತೃಭಾಷೆ ಮರಾಠಿ. ಶಿಕ್ಷಣ ಮಾಧ್ಯಮ ಕನ್ನಡ. ಅಂತೆಯೇ, ಸಂಸ್ಕೃತದಿಂದ ಶಾಸ್ತ್ರಾರ್ಥವನ್ನು ಅರಗಿಸಿಕೊಂಡವರು. ಇಂಗ್ಲೀಷ್ ದಾರ್ಶನಿಕರಾದ ಗೋಲ್ಡ್‌ಸ್ಮಿಥ್, ಶೇಕ್ಸ್‌ಪಿಯರ್, ಕೀಟ್ಸ್ ಮೊದಲಾದವರ ಕೃತಿಗಳಿಂದ ಪ್ರಭಾವಿತರಾದವರು. ಬೆಂಗಳೂರು ಆಕಾಶವಾಣಿ ನಡೆಸಿದ 'ನನ್ನ ಮೇಲೆ ಪ್ರಭಾವ ಬೀರಿದ ಪುಸ್ತಕಗಳು' ಸಂಚಿಕೆಯಡಿಯಲ್ಲಿ ಸ್ವತಃ ಬೇಂದ್ರೆಯವರೇ ನೀಡಿದ ಅಭಿಪ್ರಾಯವನ್ನು ಇಲ್ಲಿ ನೆನೆಯಬಹುದು.

ಅನ್ನವನು ನೀಡುವುದು
ನನ್ನಿಯನು ನುಡಿವುದು
ತನ್ನಂತೆ ಪರರ ಬಗೆವುದು
ಕೈಲಾಸ ಬಿನ್ನಾಣವಕ್ಕು ಸರ್ವಜ್ಞ

ಎಂಬ ಶಾಲೆಯಲ್ಲಿ ಕಲಿತ ಸರ್ವಜ್ಞನ ವಚನ ಬೀಜ ಚಿಕ್ಕಂದಿನಲ್ಲೇ ಕಂಠ ಪಾಠದ ಮೂಲಕ ಹೃದಯವನ್ನು ಹೊಕ್ಕಿತು. 'ಅನ್ನದಾನಕ್ಕಿಂತ ಇನ್ನು ದಾನಗಳು ಉಂಟೇ? ಈವನೇ ದೇವ ಸರ್ವಜ್ಞ' ಮುಂತಾದ ವಚನಗಳಿಂದ ಅನ್ನ ದರ್ಶನವಾಯ್ತು. ಸರ್ವಜ್ಞನ ಈ ತ್ರಿಪದಿಗಳು ವೇದೋಪನಿಷತ್ತುಗಳ ರಹಸ್ಯಾರ್ಥಗಳನ್ನು ತೆರೆಯುವ ಕೀಲಿ ಕೈಗಳಿದ್ದಂತೆ, ಇವು ಸ್ವಾಧ್ಯಾಯದಲ್ಲಿ ನೆರವಾದವು. ತುತ್ತಿನ ಚೀಲ, ಅನ್ನಾವತಾರ, ಅನ್ನಯಜ್ಞ, ಬೈರಾಗಿಯ ಹಾಡು ಇವುಗಳ ಹಿಂದೆ ಸರ್ವಜ್ಞನ ವಚನಗಳ



ಸಂಸ್ಕಾರದ ಸೆಲೆ ಇದೆ. ಅದೇ ರೀತಿ, 'ಚಿಕ್ಕದಿದ್ದಷ್ಟು ಚೊಕ್ಕ' ಎಂಬ ಸುಭಾಷಿತವೂ ಬುದ್ಧಿಯಲ್ಲಿ ಮುದ್ರೆ ಒತ್ತಿತ್ತು. ಸರ್ವಜ್ಞನ ಹಾಸ್ಯ ಚಮತ್ಕೃತಿಯ ಹೊಸ ಅಂದ ಹೊಳೆದದ್ದು ಈ ಉಕ್ತಿಗಳಿಂದಲೇ. ಸಂಸ್ಕೃತ ಕವಿ ಜಗನ್ನಾಥ ಪಂಡಿತನು ಸಾರಸ್ವತ ವೀಣೆಯ ಝೇಂಕಾರಕ್ಕೆ ಶ್ರುತಿ ಹಿಡಿಸಿದನು. ಜಗನ್ನಾಥನ 'ಗಂಗಾಲಹರಿ'ಯ ಬಕುಲಾನ್ಯೋಕ್ತಿ ತನ್ನಲ್ಲಿ ಸ್ವತ್ವದ ಅರಿವು ಮೂಡಿಸಿತು ಹಾಗೂ ಆದಿಶಂಕರಾಚಾರ್ಯರು ರಚಿಸಿದ 'ಸೌಂದರ್ಯ ಲಹರಿ' ಮೂಲ ಗ್ರಂಥದತ್ತ ಮನಸ್ಸು ಸೆಳೆಯುವಂತೆ ಮಾಡಿತು.'ಗಂಗಾವತರಣ' ಕವನ ಗಂಗಾಲಹರಿಯ ಪ್ರಸಾದ ರೂಪವಾಗಿದೆ. ಅನ್ನಮಹಿಮೆ ಸರ್ವಜ್ಞನದಾದರೆ, ನೀರಿನ ಮಹಿಮೆ ಜಗನ್ನಾಥ ಕವಿಯದಾಗಿದೆ. ಹೀಗೆ, ವರಕವಿ ಬೇಂದ್ರೆ ಅವರು ಗ್ರಂಥಾಧ್ಯಯನವು ಜೀವನ ಸೂತ್ರವಾಗುಳ್ಳ ತನ್ನ ಮೇಲೆ ಬೀರಿದ ಕವಿ ಸರ್ವಜ್ಞ, ಕವಿ ಜಗನ್ನಾಥ, ಕವಿ ಲಕ್ಷ್ಮೀಶ ಹಾಗೂ ಇಂಗ್ಲೀಷ್ ದಾರ್ಶನಿಕರ ಪ್ರಭಾವ ಮತ್ತು ಕವಿ ರವೀಂದ್ರರ ಕಾವ್ಯಕ್ಕೆ ತಾನು ಮಾರುಹೋದ ಬಗೆಯನ್ನು ದೃಷ್ಟಾಂತಗಳ ಮೂಲಕ ವಿವರಿಸಿದ್ದಾರೆ. ಓದಿದ್ದನ್ನು ಮುಖೋದ್ಗತವಾಗಿಸಿಕೊಂಡು ಬರಹ ಮತ್ತು ಬದುಕು ಎರಡರಲ್ಲೂ ಅವುಗಳನ್ನು ಸಮನಾಗಿ ಹಸನಾಗಿಸಿಕೊಂಡ ಬೇಂದ್ರೆಯವರ ಪರಿ ಅದ್ವಿತೀಯವಾದುದು.

ವೇದೋಪನಿಷತ್ತುಗಳೂ ಮಂತ್ರಗಳೂ ಅವರ ವಾಣಿಯನ್ನು ಅಲಂಕರಿಸಿದ್ದವು. ಅವರು ಪ್ರಭಾವಿತರಾಗಿದ್ದ ಸಂಸ್ಕೃತ ಸಾಹಿತ್ಯದ ಪ್ರಸಿದ್ಧ ಕವಿಗಳಲ್ಲಿ ಮಹಾಕವಿ ಕಾಳಿದಾಸನೂ ಪ್ರಮುಖನು. ಇದಕ್ಕೆ ಬೇಂದ್ರೆಯವರ ಮೇಘದೂತ ಅನುವಾದ ಕಾವ್ಯ ಸಾಕ್ಷಿಯಾಗಿದೆ. 'ಅಂಬಿಕಾತನಯದತ್ತರ ಮೇಘದೂತ', ಅನುವಾದ ಕಾವ್ಯಗಳಲ್ಲೇ ಶ್ರೇಷ್ಠವೆನಿಸಿಕೊಂಡಿದೆ. 'ಸಖೀಗೀತ' ಪ್ರೇಮ ಕಾವ್ಯಗಳಲ್ಲಿ ಮಿಗಿಲೆನಿಸಿದೆ. ಜೀವನವನ್ನು ಉಜ್ಜೀವನಗೊಳಿಸುವ ಇವರ ಅನೇಕ ಕವನ ಸಂಕಲನಗಳು ಗರಿ, ಉಯ್ಯಾಲೆ, ನಾದಲೀಲೆ, ಮುಗಿಲ ಮಲ್ಲಿಗೆ, ನಾಕುತಂತಿ, ಸಂಚಯ, ಉತ್ತರಾಯಣ, ಕೃಷ್ಣಾಕುಮಾರಿ ಮೊದಲಾದವುಗಳು ಸಹೃದಯರ ಮನವನ್ನು ತಟ್ಟಿವೆ. 'ಅಮಂತ್ರಂಅಕ್ಷರಂ ನಾಸ್ತಿ' ಎಂಬ ಸುಭಾಷಿತದಂತೆ, ಇವರ 'ಡೂ', 'ನೋ' ಮುಂತಾದ ಒಂದಕ್ಷರ ಶೀರ್ಷಿಕೆಯ ಕವಿತೆಗಳೂ ಅರ್ಥಪೂರ್ಣವಾಗಿ ಸಾರ್ಥಕತೆಯನ್ನು ಹೊಂದಿವೆ. ಸಣ್ಣಕತೆ-ಹರಟೆ, ನಾಟಕ, ಅನುವಾದ ಹಾಗೂ ಹಲವು ವಿಮರ್ಶಾ ಗ್ರಂಥಗಳನ್ನೂ ಇವರು ರಚಿಸಿದ್ದಾರೆ. 'ಉಮಾಳಾ' ಬೇಂದ್ರೆಯವರ ಮರಾಠಿ ಕವನ ಸಂಕಲನವಾಗಿದೆ.

ದ. ರಾ. ಬೇಂದ್ರೆ ಕಾವ್ಯಕೂಟ ಬೆಂಗಳೂರು ಇವರು ಸಂಶೋಧನ
ವಿದ್ಯಾರ್ಥಿಗಳಿಗಾಗಿ ನಡೆಸಿದ ಸ್ಪರ್ಧೆಯಲ್ಲಿ (2023)
ದ್ವಿತೀಯ ಬಹುಮಾನ ಗಳಿಸಿದ ಲೇಖನ

*(ಮುಂದುವರಿಯುವುದು)*

*PAGE DONATED BY : **AKADAS & FAMILY***

# YES NO

✍ **L. V. Shastri, Bengaluru**

The three and two letter syllables, yes and no, are probably the most used in our living. The range of issues they cover varies from usual to substantial to outright colossal like, for example, sugar for tea, matrimonial deals, heralding and precipitating bloody wars and so on. Yes and No are generally used in either or format. However there would be issues where they are used in tandem i.e.; they are uttered in same breath.

Answering with 'YES AND NO' would mean that the issue under question is still not settled for sure, implying an element of duality / uncertainty. There would, of course, be such occasions in our routine living. However, noteworthy is the fact that that such issues also pertain to frontier areas of science and to fundamental concepts of philosophy systems.

In our daily living, one likes to play nice and say yes to most queries in order to avoid possible unpleasantness. Still, the advisability and importance of saying No cannot be overlooked. In fact, saying No may help someone to handle the problem one is facing and find proper solution. For example, suppose that someone close to you approaches asking for monetary help to tide over his problem. If you are not in a position to offer the needed help, saying No would help that person to look for other source of help and the problem may find solution eventually. Many situations like this can be envisaged. Of course, umpteen jokes float around showing comic situations created by saying yes or no between husband and wife.

There can be occasions where saying either yes or no would be risky and one has to be quite clever in handling them. Sample this humor: On a full moon night, two drunkards were fiercely arguing and fighting as to whether it was daytime or night. They spotted a passerby and approached for the answer. One drunkard blurted 'I say it is daytime now. You say 'Yes'. The stranger gauged the gravity of the situation; in order to avoid getting possible blows, mustered his cleverness and pacified them saying 'I am not staying in your village and so won't know for sure. You may please ask some local fellow!' and walked away unhurt!

Not having clear cut answers happens to be applicable to modern physics, in the form of quantum physics. Even the subatomic entities like electron or even light are found to exhibit duality in their properties / behavior, being either wave or particle. This has led to 'Uncertainty Principle' which has assumed significance as 'law' in quantum mechanics akin to Newton's Laws of Motion in classical physics. A thought experiment called 'Shrodinger Cat' is quite popular among scientists. Herein, a cat is put in a closed box containing a poisonous material like radioactive source. If asked whether the cat is alive / dead at any given time, the answer would be 'Yes and No'!



In the present day cosmology the answer to whether life exists any where else, other than our beloved Earth, has remained totally elusive. Highly advanced instrumentation, like the James Web Telescope, JWT, has only reiterated that the universe is very vast, unimaginably vast. Recent space explorations like Chandrayan of India, have detected presence of water molecules in the extraterrestrial space. This has led to thoughts about colonizing the nearby planets. However our entire solar system is like a drop in the ocean in the vast cosmos and answer to whether and where life forms would exist would be as 'Yes and No'.

Furthermore, it is now held that the vast cosmos originated from Big Bang. The big bang theory won't tell or even consider as to what led to the big bang or what existed before the big bang. The issue is of considerable debate even today. Vedanta philosophy realized the futility of finding the 'first cause' and said that everything in creation started with SAT (consciousness). This view finds respect and acceptance among some physists of today too.

Lastly, the GOD concept is not free from uncertainty among the philosophy systems and religions of the world. Every religion has its own description of GOD. Many religions have the offshoots of sect. It is well known that in Indian philosophy, there are three schools of thought regarding the relation between individual soul and universal soul viz; Advaita (monism, Dvaita (dualism), and Qualified Advaita, all founded by eminent Acharyas, Shankara, Madhwa and Ramanuja respectively. The last school can be said to be 'Yes and No' response to the tenets of Advaita and Dvaita. On the other hand, the Sankhya school does away with reference to GOD and, instead, invokes Prakruti and Purusha (matter and spirit) for the creation and governance of CREATION. We thus find that 'YES and NO' situation applies to philosophy systems too.

In summary, many a question may be answered as 'yes' or 'no' in our daily living. The repercussions thereof may be pleasant, unpleasant, small or big. At times, it may call for cleverness to evade the question altogether. However, there are fundamental questions in science as also in philosophy / religion where the fair answer would be 'Yes and No'. ❍

*PAGE DONATED BY :* ***SHRI N. R. HEGDE, DOMBIVLI***

# Arecanut Farming and Economic Empowerment of Farmers

✍ Dr. G. V. Joshi, Kekkar

Economic empowerment of farmers growing different varieties of arecanut in different regions in a stratified society like ours should be interpreted to mean an institutional arrangement or a process or a policy in which production, marketing and processing areinterlinked and integrated. This should result in widening the choice of thefarmers for improving their standard of living through the income generated. Its impact is visible while its measurement is difficult. It is so because a number of economic, social,cultural, and historical factors shape its modus operandi, manyof which are obviously beyond the control of individual arecanut growers. An attempt, therefore,is made in this article to examine the effects of these factors in the light of studies conducted in different areas with specialreference to the role of CAMPCO wherever needed.

**Crucial Issues and their Contextual Relevance.**

Arecanut farming is no doubt an important subsector in Karnataka State as substantiated by various authentic reports, articles published in leadingjournals and books authored by researchers.The no of uses to which products grown on arecanut orchards could be put has been steadily rising(Ramappa, 2013).It is necessary to pay special attention to the living conditions of the weaker section consisting of a large number of marginal and small farmers growing arecanut (Joshi, 2013).The equity impact of price variationscannot be just assumed away with theexpansionof this weaker section in the traditional areas namely, Dakshina Kannada (hereafter D.K), Uttara Kannada (hereafter U. Kannada) Shimoga and Chickamagalurdistricts. The rise in the prices of garden produces isnot a panacea to the problems of this sectioneither. Thelarge-scale outmigration of the successors of small and marginal farmers is glaring evidence to this reality ( Aaron Hegde and John Deal, 2014).

There are now striking variations in the area, production, and productivity of arecanut even within the same state. For instance, in the non-traditional areas of Hassan,Mandya, Chitradurga, Davangere and Tumkur districts of Karnataka, plain lands are blessed with irrigational projects and channel water. The landholdings in these districts are comparatively big to serve mainly commercial purpose. In the traditional areas the farmers are generally growing along withareca (main crop) banana, pepper, cardamom, cocoa, coconut, and vanilla as sub-crops. Now CAMPCO isrelentlessly encouraging the farmers in non-traditional areas to grow other crops along with arecanut. The co-operative societies are playing a pivotal role in marketing garden produces in Karnataka. However, the degree or the extent of economic empowerment of farmers is not the same everywhere here. This poses a difficulty to CAMPCO while carrying out its operations.



There are both inter-state and intra-state variations in the area, production, and yield of arecanut. Besides Karnataka, Kerala and Assam are to be reckoned as leading arecanut producing states. The cultivation of this crop is scattered in many parts of these three states which together account for 89 per cent of the total area and 84 per cent of total production of arecanut in India (Tigari and Rajamma, 2019). This is much related to the economic empowerment of farmers.Enough is the empirical evidence to disclose that of all the incentives available to farmers the one that makes perceptible and enduring impact is the price incentive and CAMPCO has been trying to show this through its timely operations.A study conducted in 1985 by Gajanana revealed that the farmers in D.K. district added 30 per cent more under cultivation for every 50 per cent increase in the prices of arecanut.

When we take an internationalperspective, mention needs to be made of Bangladesh, SriLanka, Malaysia, Indonesia, Philippines, and Myanmar . These are the countries where the cost of cultivation is less than in India and the clandestinearrangements for import from these counties are more often than not throwing a formidable and daunting challenge to CAMPCO. It has rightly expressed displeasure over the notification of the Directorate General of Foreign Trade, Government of India dated September 28,2022 allowing the annual importof 17,000 tonsof green arecanut from Bhutan without minimum import price. That with this policy decision there was a sudden fall in the price of arecanut in Puttur in D.Kdisclosed vulnerability of arecanut growers in Karnataka.

**Empowerment : Past and Present**

The Gazetteer of the Bombay Presidency (popularly called Kanara Gazetteer) gave as early as 1882 a graphic description of the diversity of crops raised onthe areca gardens in the upghat region of the U. Kannada district (North Kanara) consisting of Sirsi, Siddapur and Yellapur taluks. Here caste factor having significance in Sociology comes to the fore as economic empowerment is related to it.The numerically predominant caste having interest in garden cultivationthen consistedof Haviks who were treated as the "best cultivators"by the Kanara Gazetteer who gave"thecountry its special character". They were capitalist farmers who employed wage labour on a large scale, produced surplusvalue andrealizedthis surplus through sale in towns (Joshi, 1987). By the beginning of 1920s there was a change in their attitude and outlook as many of them had taken to lavish spending, careless utilization of resources including land and litigiousness (Collins, 1926).Many of theseHaviks gardeners were steeped in debts eventually losing the ownership of lands to betelnut merchantsor Sawkars in Sirsi town who gave loans by treating gardens as security.

*(to be contd...)*

*PAGE DONATED BY : **SHRI ROKESH HEGDE & FAMILY, DAHISAR***

## DONATIONS

| | | |
|---|---|---|
| 1. | Hwt - Education Adoption - G. V. Hegde, Mulund | 1,00,000 |
| 2. | Hwt - Medical - Prakash Rao | 50,000 |

**WWC**

| | | |
|---|---|---|
| 1. | Sulekha Bhat | 25,000 |
| 2. | Shailaja Hegde | 15,000 |

**DURGA POOJA**

| | | |
|---|---|---|
| 1. | S. P. Bhat | 5,000 |
| 2. | M. S. Rao | 5,001 |
| 3. | A. M. Suryanarayana | 5,001 |
| 4. | V. V. Pandit | 5,001 |
| 5. | Ganapati Joshi | 2,000 |
| 6. | Rajat Hegde | 2,000 |
| 7. | Akash Marigoli | 2,000 |
| 8. | G. C. Bhat | 1,501 |
| 9. | Chintamani Joshi | 1,500 |
| 10. | Mahesh Joshi | 1,100 |
| 11. | Vanita Shridhar Bhat | 1,002 |
| 12. | R. P. Hegde | 1,001 |
| 13. | K. Subramanya Bhat | 1,000 |
| 14. | Rajaram Hegde | 1,000 |
| 15. | Ramana Bhat | 1,000 |
| 16. | R. N. Kameshwar | 1,000 |
| 17. | Amita Bhagwat | 1,000 |
| 18. | Prasanna Hegde | 1,000 |
| 19. | N. K. Hegde | 510 |
| 20. | Lalita Markande | 501 |
| 21. | Saroja Hegde | 500 |
| 22. | Shubha Hegde | 500 |
| 23. | Venkatesh Bhat | 500 |
| 24. | Mahesh Hegde | 500 |
| 25. | U. T. Krishnamurthy | 500 |
| 26. | Honni Bhat | 100 |
| 27. | Hundi Collection | 2,470 |

## HAVYAKA

**33rd Annual Satyanarayana Pooja & Get-together**

**Date: 5th Nov 2023**

**Venue:**
**Sarvesh Mangal Karyalaya, Tilak Rd., Dombivili East**

**Timing: 9 am to 5 pm**

**ATTEND, PARTICIPATE, ENJOY & RETAIN THE MEMORIES**

All Havyakas are requested to attend the function with their family and friends to make this occasion a grand success


UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*


*PAGE DONATED BY :* ***SHRI ANANT GANESH BHAT, BANDRA & FAMILY***

# Thinking of Risk before Return

✍ **Vinod N. Bhat**

**Selecting Mutual Funds for our Portfolio**

Siddharth had explained the basic principles of how to implement asset allocation to his client Ashwin.

'OK,' Ashwin said. 'I understand that if I am investing say Rs 1000 per month, then, based on my risk profile, I need to start by having an initial allocation across different asset classes. For example, I can invest in Rs 700 to Equity, Rs 200 to Fixed Income, and Rs 100 to Gold. And then at regular intervals, I can rebalance based on market conditions. Is that right?'

'That's correct,' Siddharth replied.

'So, my next question is how do I choose the Mutual Funds and ETFs that would be right for my portfolio.'

'That's a good question. The best thing to do is to diversify across different categories of funds.'

'Can you explain it in a bit more detail?'

'Of course. For example, in Equity, there are different categories like:

a) Largecap funds which invest in the Top 100 companies by market capitalization and Index funds which just invest in stocks in a particular index such as Nifty 50.

b) Midcap fund which invest in companies ranked 101 to 250 by market capitalization and Smallcap Funds which invest in companies ranked 251 onwards by market capitalization.

c) Diversified funds like Flexicap, Multicap, and Large and Mid Cap fund which have the flexibility to invest across large, mid, and smallcap companies.

d) Sectoral/Thematic Funds which invest in stocks in a particular sector like Banking or Financial Services, Pharma & Healthcare, Technology, etc. or in stocks focused on a particular theme like Services, Make in India, Transportation & Logistics, etc.

So, of the Rs 700 that you may be allocating to Equity, you can invest 35-40% in Diversified funds, 20-25% to Largecap fund or Index fund, 15-25% to Midcap and Smallcap funds, and 15-20% to Sectoral/Thematic funds.'

'OK. But there are so many funds available in each category being offered by different fund houses. How do I choose the best ones?'

'You are right. That can be confusing. But you need to keep things simple. There are a number of websites like valueresearchonline.com which provide basic data on Mutual Funds. You can start by looking at the last 1-year, 3-year, and 5-year returns.'

'But what exactly do I look for?'

'When you look at the returns of a fund, first check whether the fund has outperformed its benchmark or not. And then check whether the fund has outperformed its category average. For example, for a Flexicap fund, you would check if the fund has outperformed the Nifty 500 index in different time frames. And then you would check if the fund has done better than the average returns of the Flexicap category too in those time frames.'



'OK. Got it.'

'But that's just the first step. Take care that you don't just go by historical performance.'

'So, what else should I look at?'

'You also need to look at the volatility in the performance. That gives an idea of the consistency in fund performance. Higher the volatility, higher the risk. So, if the returns of two funds are around the same, a fund with lower volatility would be better.'

'This is getting a bit technical.'

'Yes, but you need to understand the basics if you want to take good investment decisions. You can also look at some metrics like the Sharpe ratio which give a quick sense of the risk-adjusted return. Just bear in mind that risk and return go together. You cannot just look at the returns without factoring in the associated risk.'

'OK. I will keep that in mind.'

'Then, you should also look at the investment style and track record of the fund manager. A lot of information is available online which should help you to understand the thought process of the fund manager and how their performance has in the past.'

'I guess I should try and stick to fund managers who have delivered consistent returns in the past rather than ones whose performance has been all over the place.'

'That's right. Lastly the portfolios of the funds are also available online. If possible, you should also check which stocks the fund has invested in and how it is positioned in terms of exposure to different sectors, whether it has more growth stocks or value stocks, etc.'

'Hmm. So, this will involve some work,' Ashwin said after some thought.

'Yes, but if you put in the effort, it will help you to choose right funds for your portfolio and meet your target returns. This is what investing is all about,' Siddharth responded.

*(to be continued)*

[Vinod Bhat is the author of the book **'The Financial Independence Marathon'** which has been recently published by Penguin India. Readers can refer to the book for many such golden nuggets. The book is available on Amazon.in at : https://www.amazon.in/Financial-Independence-Marathon-Unlock-Power/dp/0143459988]

*PAGE DONATED BY :* ***SHRI V. G. BHAT, NIGDI***

# ಮಾಸ ಭವಿಷ್ಯ

✍ ಶ್ರೀಪತಿ ಭಟ್

**ಮೇಷ :** ಸಂಪನ್ಮೂಲಗಳಿಗಾಗಿ ಸಾಕಷ್ಟು ಹುಡುಕಾಟ ನಡೆಸುವಿರಿ. ಇತರರ ಕೆಲಸಗಳ ಯಶಸ್ಸಿಗಾಗಿ ಸಲಹೆ ನೀಡುವ ಅವಕಾಶ ದೊರೆಯುತ್ತದೆ. ಈ ಹಿಂದೆ ನಿಲ್ಲಿಸಿದ್ದ ವಿದ್ಯಾಭ್ಯಾಸ ಮರು ಆರಂಭಿಸಲು ಸೂಕ್ತ ಆಲೋಚನೆ ಮಾಡುವಿರಿ. ಕೌಟುಂಬಿಕ ಸಮಸ್ಯೆಗಳು ಎದುರಾದರೂ, ನಂತರ ತಿಳಿಯಾಗುತ್ತವೆ. ಹೊಸ ವ್ಯವಹಾರದಲ್ಲಿ ಭಾಗವಹಿಸುವ ಅವಕಾಶ ದೊರೆಯುತ್ತದೆ. ಆರೋಗ್ಯದ ಬಗ್ಗೆ ಎಚ್ಚರವಿರಲಿ. (ಅದೃಷ್ಟ ಸಂಖ್ಯೆ : 2)

**ವೃಷಭ :** ವಿದೇಶದಲ್ಲಿ ಸಂಸ್ಕೃತಿ ಪ್ರಚಾರ ಮಾಡುವವರಿಗೆ ಮಾನ್ಯತೆ ಮತ್ತು ಗೌರವ ದೊರೆಯುತ್ತದೆ. ಹಣಕಾಸಿನ ಸ್ಥಿತಿಯು ಸಾಕಷ್ಟು ಉತ್ತಮಗೊಳ್ಳುವುದು. ತಾಯಿಯ ಹಿತ ನುಡಿಗಳು ನಿಮಗೆ ಒಳಿತನ್ನು ಮಾಡುತ್ತವೆ. ನಿಮ್ಮ ವ್ಯವಹಾರದಲ್ಲಿ ಸಾಮಾನ್ಯ ಅಭಿವೃದ್ಧಿಯನ್ನು ಖಂಡಿತ ಕಾಣಬಹುದು. ಮನೆ ಬಳಕೆಯ ಹೊಸ ವಸ್ತುಗಳನ್ನು ಖರೀದಿ ಮಾಡುವಿರಿ. ವಿಪರೀತ ಕೆಲಸದ ಮೇಲೆ ಆಲಸ್ಯವಾಗಬಹುದು. (ಅದೃಷ್ಟ ಸಂಖ್ಯೆ : 4)

**ಮಿಥುನ :** ವೈಯಕ್ತಿಕ ವ್ಯವಹಾರಗಳ ಹೋರಾಟದಲ್ಲಿ ಪ್ರಗತಿಯನ್ನು ಕಾಣುವಿರಿ. ಮನೆಯವರ ಆರೋಗ್ಯದ ಬಗ್ಗೆ ಎಚ್ಚರ ವಹಿಸಿ. ವಿದ್ಯಾರ್ಥಿಗಳಿಗೆ ಏಕಾಗ್ರತೆ ಅತ್ಯಗತ್ಯ. ಕೆಲವರಿಗೆ ಅಧ್ಯಯನದ ನಿಮಿತ್ತ ದೂರ ಪ್ರಯಾಣ ಮಾಡಬೇಕಾದ ಸಂದರ್ಭವಿರುತ್ತದೆ. ಆರ್ಥಿಕ ಸಬಲತೆಗಾಗಿ ಹೊಸ ಹೊಸ ದಾರಿಗಳನ್ನು ಹುಡುಕುವಿರಿ. ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಕೆಲಸವೊಂದು ಈಗ ಕೈಗೂಡುವುದು. (ಅದೃಷ್ಟ ಸಂಖ್ಯೆ : 9)

**ಕರ್ಕಾಟಕ :** ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಗತಿ ಕಾಣಬಹುದು. ಇತರರ ಅಭಿವೃದ್ಧಿಯ ಬಗ್ಗೆ ಚಿಂತೆ ಮಾಡದೆ ನಿಮ್ಮ ಅಭಿವೃದ್ಧಿಯ ಬಗ್ಗೆ ಗಮನ ಹರಿಸಿ. ಕ್ರೀಡಾಪಟುಗಳಿಗೆ ಅವರ ಸಾಮರ್ಥ್ಯವನ್ನು ಪ್ರದರ್ಶಿಸಲು ಉತ್ತಮ ಅವಕಾಶ ದೊರೆಯಬಹುದು. ವಿವಾದಿತ ವಿಷಯವೊಂದನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಲು ಅವಕಾಶ ದೊರೆಯುತ್ತದೆ. ಹತ್ತಿ ಬಟ್ಟೆ ಮಾರುವವರಿಗೆ ವ್ಯವಹಾರದ ವಿಸ್ತರಣೆ ಇರುತ್ತದೆ. (ಅದೃಷ್ಟ ಸಂಖ್ಯೆ : 7)

**ಸಿಂಹ :** ನಿಮ್ಮ ಬುದ್ಧಿವಂತಿಕೆಯಿಂದ ಉದ್ಯೋಗದಲ್ಲಿ ಬದಲಾವಣೆಯನ್ನು ಪಡೆಯುವಿರಿ. ಹಣಕಾಸಿನ ಅನುಕೂಲತೆ ನಿರೀಕ್ಷೆಯಂತೆ ಹೆಚ್ಚಾಗುತ್ತದೆ. ನಿಮ್ಮ ಸಮಾಜದ ಮುಖಂಡರೊಂದಿಗೆ ಬಾಂಧವ್ಯವನ್ನು ವೃದ್ಧಿಸಿಕೊಳ್ಳುವ ಪ್ರಯತ್ನ ಪಡುವಿರಿ. ವಿವಾಹ ಆಕಾಂಕ್ಷಿಗಳಿಗೆ ಸಂಬಂಧಗಳು ಕೂಡಿ ಬರುವ ಸಾಧ್ಯತೆಗಳಿವೆ. ವಾಹನ ಚಲಾವಣೆಯನ್ನು ಜಾಗರೂಕತೆಯಿಂದ ಮಾಡಿರಿ. (ಅದೃಷ್ಟ ಸಂಖ್ಯೆ : 3)

**ಕನ್ಯಾ :** ದೃಢ ಸಂಕಲ್ಪದಿಂದ ಮಾಡಿದ ಕೆಲಸಗಳು ಪೂರ್ಣಗೊಳ್ಳುವವು. ಕೃಷಿ ಕಾರ್ಯಗಳಲ್ಲಿ ತೊಡಗಿಕೊಳ್ಳುವಿರಿ. ಸಾಹಿತ್ಯ ಕಲಾವಿದರುಗಳಿಗೆ ಹೆಚ್ಚಿನ ಕೆಲಸಗಳು ದೊರೆತು ಸಂಪಾದನೆ ಹೆಚ್ಚುತ್ತದೆ. ಅನಾವಶ್ಯಕವಾಗಿ ಖರ್ಚು ಮಾಡುವುದನ್ನು ಕಡಿಮೆ ಮಾಡಬೇಕು. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಹೊಟ್ಟೆಯೊಳಗೆ ತೊಂದರೆ ಇರುವವರು ವೈದ್ಯಕೀಯ ಚಿಕಿತ್ಸೆಗೆ ಒಳಗಾಗುವುದು ಉತ್ತಮ. (ಅದೃಷ್ಟ ಸಂಖ್ಯೆ : 6)

**ತುಲಾ :** ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಸಂದರ್ಭವಿದೆ. ವಿದ್ಯಾರ್ಥಿಗಳು ಹೆಚ್ಚು ಶ್ರಮಪಟ್ಟರೂ ಫಲಿತಾಂಶ ಕಡಿಮೆ ಇರುತ್ತದೆ. ರಾಜಕಾರಣಕ್ಕೆ ಸೇರಬೇಕೆನ್ನುವವರು ಸ್ಥಾನಮಾನಗಳ ಬಗ್ಗೆ ಸರಿಯಾಗಿ ತಿಳಿದು ಸೇರುವುದು ಉತ್ತಮ. ಗೃಹನಿರ್ಮಾಣ ಮಾಡುವವರಿಗೆ ಆರ್ಥಿಕ ಸಂಕಷ್ಟಗಳು ಬರುವ ಸಾಧ್ಯತೆ ಇದೆ. ಹೂಡಿಕೆ ವ್ಯವಹಾರಗಳಿಂದ ಹೆಚ್ಚಿನ ಹಣ ಬರುತ್ತದೆ. (ಅದೃಷ್ಟ ಸಂಖ್ಯೆ : 8)



**ವೃಶ್ಚಿಕ :** ವಿದ್ಯುತ್ ಉಪಕರಣಗಳನ್ನು ಮಾರಾಟ ಮಾಡುವ ವ್ಯವಹಾರದಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ಬಗೆಹರಿದಂತಿದ್ದ ವ್ಯಾಜ್ಯಗಳು ಪುನಃ ತಲೆದೋರುವ ಸಂದರ್ಭವಿದೆ. ನಯವಂಚಕರಿಂದ ನಿಮ್ಮ ಹಣ ಕರಗುವ ಸಾಧ್ಯತೆ ಇದೆ. ನಿಮ್ಮ ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿಯನ್ನು ಕಂಡರೂ ಸಾಮಾಜಿಕ ಜೀವನದಲ್ಲಿ ಪಾರದರ್ಶಕವಾಗಿರುವುದು ಒಳ್ಳೆಯದು, ಸಂದೇಹಾಸ್ಪದ ವ್ಯಕ್ತಿಗಳಿಂದ ದೂರವಿರಿ. (ಅದೃಷ್ಟ ಸಂಖ್ಯೆ : 5)

**ಧನು :** ಹೊಸ ವಾಹನ ಖರೀದಿ ಮಾಡುವ ಸಾಧ್ಯತೆಗಳಿವೆ. ಹಿರಿಯರ ಆರೋಗ್ಯದ ಬಗ್ಗೆ ಸಾಕಷ್ಟು ಸುಧಾರಣೆಯನ್ನು ಕಾಣಬಹುದು. ದಿನಸಿ ವ್ಯಾಪಾರಸ್ಥರಿಗೆ ವ್ಯವಹಾರ ವೃದ್ಧಿ, ಆದಾಯ ಹೆಚ್ಚುತ್ತದೆ. ಸಮಾಜದಿಂದ ನಿಮ್ಮ ಕೆಲಸಕ್ಕೆ ಗೌರವ ದೊರೆಯುತ್ತದೆ. ನ್ಯಾಯವಾದಿಗಳಿಗೆ ವಾದಗಳಲ್ಲಿ ಜಯ ದೊರೆತು ಗೌರವ ಹೆಚ್ಚುತ್ತದೆ. ಕಬ್ಬಿಣ ಮತ್ತು ಉಕ್ಕಿನ ವ್ಯಾಪಾರಿಗಳಿಗೆ ವಹಿವಾಟು ವೃದ್ಧಿಸಿ ಆದಾಯ ಹೆಚ್ಚುತ್ತದೆ. (ಅದೃಷ್ಟ ಸಂಖ್ಯೆ : 1)

**ಮಕರ :** ನೂತನ ಮನೆ ನಿರ್ಮಾಣ ಮಾಡಲು ಮನಸ್ಸು ಮಾಡುತ್ತೀರಿ. ಸ್ವಯಂ ಉದ್ಯೋಗ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಸರ್ಕಾರಿ ಕಚೇರಿಯ ಕೆಲಸಗಳಲ್ಲಿ ಸ್ವಲ್ಪ ಹಿನ್ನಡೆಯನ್ನು ಕಾಣಬಹುದು. ಊಟ-ತಿಂಡಿಗಳನ್ನು ಅಲ್ಪ ಪ್ರಮಾಣದಲ್ಲಿ ತಯಾರಿಸಿ ಮಾರಾಟ ಮಾಡುವವರಿಗೆ ಹೆಚ್ಚಿನ ವ್ಯಾಪಾರವಿರುತ್ತದೆ. ಹಳೆಯ ಲೇಖಕರು ಹೊಸ ಅವಿಷ್ಕಾರಗಳೊಂದಿಗೆ ಹೊಸತನವನ್ನು ಕಾಣುವರು. ಕೃಷಿ ಉತ್ಪನ್ನ ಮಾರಾಟಗಾರರ ಆದಾಯದಲ್ಲಿ ಏರಿಕೆ ಇರುತ್ತದೆ. (ಅದೃಷ್ಟ ಸಂಖ್ಯೆ : 4)

**ಕುಂಭ :** ಕೆಲವು ರಾಜಕೀಯ ವ್ಯಕ್ತಿಗಳಿಗೆ ಸೂಕ್ತ ಸ್ಥಾನ ಸಿಗುವ ಸಾಧ್ಯತೆ ಇದೆ. ವಿದೇಶದಲ್ಲಿ ಧರ್ಮ ಬೋಧನೆ ಮಾಡುವವರಿಗೆ ಹೆಚ್ಚಿನ ಅನುಕೂಲಗಳು ದೊರೆಯುತ್ತದೆ. ಕೆಲವು ಸ್ತ್ರೀಯರಿಗೆ ಸಣ್ಣ ಪುಟ್ಟ ಆರೋಗ್ಯ ವ್ಯತ್ಯಾಸಗಳಾಗಬಹುದು. ಯುವಕರ ಅತಿಯಾದ ಆತ್ಮವಿಶ್ವಾಸವು ಅವರನ್ನು ನಗೆಪಾಟಲಿಗೆ ದೂಡುವ ಸಾಧ್ಯತೆ ಇದೆ. ಬೆಂಕಿಯೊಡನೆ ಕೆಲಸ ಮಾಡುವವರು ಎಚ್ಚರವಾಗಿರುವುದು ಒಳ್ಳೆಯದು. (ಅದೃಷ್ಟ ಸಂಖ್ಯೆ : 9)

**ಮೀನ :** ಸಂಗೀತಗಾರರಿಗೆ ಪ್ರೋತ್ಸಾಹ ದೊರಕುತ್ತದೆ. ಹಣದ ಒಳಹರಿವು ಸ್ವಲ್ಪಮಟ್ಟಿಗೆ ಉತ್ತಮವಾಗಿರುತ್ತದೆ. ಸಹೋದರಿಯರಿಂದ ಹೆಚ್ಚಿನ ಸಹಕಾರ ದೊರೆಯುತ್ತದೆ. ತೆರಿಗೆ ತಜ್ಞರಿಗೆ ಕೆಲವು ಕಷ್ಟಗಳು ಎದುರಾಗಬಹುದು. ಸಂಗಾತಿಯ ಸಹಕಾರದಿಂದ ಸ್ವಯಂ ವೃತ್ತಿಯಲ್ಲಿ ಅಭಿವೃದ್ಧಿಯನ್ನು ಸಾಧಿಸುವಿರಿ. ಕಟ್ಟಡ ಕಾರ್ಮಿಕರಿಗೆ ಹೆಚ್ಚಿನ ಕೆಲಸ ದೊರೆತು ಸಂಪಾದನೆ ಹೆಚ್ಚುತ್ತದೆ. (ಅದೃಷ್ಟ ಸಂಖ್ಯೆ : 2)

(ಶ್ರೀ ಶ್ರೀಪತಿ ಭಟ್ ಆಚಾರ್ಯರು ಪೇಜಾವರ ಶ್ರೀಗಳ ಅಧೀನದಲ್ಲಿ ಅವರ ವಿದ್ಯಾಪೀಠ ಆಶ್ರಮದಲ್ಲಿ ಅಧ್ಯಯನ ಮುಗಿಸಿದ್ದಾರೆ. ಅವರಿಗೆ ಜ್ಯೋತಿಷ್ಯ ಶಾಸ್ತ್ರದಲ್ಲಿ 20 ವರ್ಷಗಳ ಅನುಭವವಿದೆ. ವೇದ, ಉಪನಿಷತ್, ಜ್ಯೋತಿಷ್ಯದ ಪ್ರಕಾರಗಳನ್ನು ಚೆನ್ನಾಗಿ ಅಧ್ಯಯನ ಮಾಡಿ 20 ವರ್ಷಗಳ ಅನುಭವದಲ್ಲಿ ಬಡಬಗ್ಗರಿಗೆ ಸಹಾಯ ಮಾಡುತ್ತಾ ಇದ್ದಾರೆ. ಹನುಮಂತ ನಗರದ ಮಾರುತಿ ಸರ್ಕಲ್‌ನಲ್ಲಿ ಇರುವ ಬಲಮುರಿ ಗಣಪತಿ ದೇವಸ್ಥಾನದ ಪ್ರಧಾನ ಅರ್ಚಕರಾಗಿಯೂ25 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಸಂಪರ್ಕ ಸಂಖ್ಯೆ : 99000 00198)

*PAGE DONATED BY :* ***SMT. KALA BHAGWAT,*** **KHARGAR** ***IN MEMORY OF MOTHER LATE SMT. GOURI BHAT***

# ಸಂಕ್ಷಿಪ್ತ ಸುದ್ದಿಗಳು

## ವಾರ್ಷಿಕ ದುರ್ಗಾಪೂಜೆ

ಹವ್ಯಕ ವೆಲ್ಫೇರ್ ಟ್ರಸ್ಟ್ ಮುಂಬಯಿ, ನವರಾತ್ರಿ ಮಹೋತ್ಸವದ ಅಂಗವಾಗಿ ವಾರ್ಷಿಕ ದುರ್ಗಾಪೂಜೆಯನ್ನು ಘಾಟ್ಕೋಪರ್‌ನ ಹವ್ಯಕರ ಸಭಾಗೃಹದಲ್ಲಿ ಅಕ್ಟೋಬರ್ 15ರಂದು ಆಯೋಜಿಸಿತ್ತು. ಶ್ರೀ ಗೋಪಾಲ ಗಾಯತ್ರಿ ಅವರ ಪೌರೋಹಿತ್ಯದಲ್ಲಿ ಶ್ರೀಮತಿ ಶೋಭಾ ಹಾಗೂ ಶ್ರೀ ವಸಂತ್ ಭಟ್ ದಂಪತಿ ಸಂಕಲ್ಪವನ್ನು ಕೈಗೊಂಡು ಶಾಸ್ತ್ರೋಕ್ತವಾಗಿ ಪೂಜೆಯನ್ನು ನೆರವೇರಿಸಿದರು. ವಿವಿಧ ಹೂಗಳಿಂದ ಅಲಂಕೃತಗೊಂಡ ದೇವಿಮಾತೆಯನ್ನು ಲಲಿತಾ ಸಹಸ್ರನಾಮ ಹಾಗೂ ಕುಂಕುಮಾರ್ಚನೆಯ ಮೂಲಕ ಅರ್ಚಿಸಲಾಯಿತು. ಡೊಂಬಿವಲಿಯ ಹವ್ಯಕ ಭಜನಾಮಂಡಳಿಯ ಸದಸ್ಯರು ಮತ್ತು ನೆರೆದ ಭಕ್ತ ವೃಂದದವರು ಭಜನೆಯನ್ನು ಹಾಡಿದರು. ದೇವಿಯ ಸ್ತುತಿ, ಸ್ತೋತ್ರ, ಜಯಘೋಷಗಳೊಂದಿಗೆ ಮಹಾ ಮಂಗಳಾರತಿಯನ್ನು ಮಾಡಲಾಯಿತು. ಹೆಂಗಳೆಯರಿಗೆ ಅರಿಶಿನ, ಕುಂಕುಮ, ಫಲ, ಪುಷ್ಪಗಳನ್ನು ನೀಡಲಾಯಿತು. ನೈವೇದ್ಯ ಪ್ರಸಾದ ಪಂಚಕಜ್ಜಾಯ, ಕೋಸಂಬರಿ, ಪಾನಕಗಳನ್ನು ಎಲ್ಲರಿಗೂ ವಿತರಿಸಲಾಯಿತು. ಆ ದಿನದ ವಿಶೇಷ ಕಾರ್ಯಕ್ರಮವಾದ ಹಿರಿಯ ಹವ್ಯಕ ಮಹನೀಯರಿಗೆ ನೀಡಲಾಗುವ 'ಗೌರವ ಸಮರ್ಪಣೆ' ಯಶಸ್ವಿಯಾಗಿ ನೆರವೇರಿತು.

ಮುಂಬಯಿಯ ಹವ್ಯಕ ಸಂಸ್ಥೆಯನ್ನು ಕಟ್ಟಿ ಬೆಳೆಸುವುದರಲ್ಲಿ ತಮ್ಮ ಯೋಗದಾನವನ್ನು ನೀಡಿದ ಹಿರಿಯ ಹವ್ಯಕ ಸದಸ್ಯರನ್ನು ಗುರುತಿಸಿ ಸನ್ಮಾನಿಸುವ ಕಾರ್ಯಕ್ರಮವನ್ನು ಕಳೆದ ಕೆಲವು ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ. ಈ ವರ್ಷ ಶ್ರೀ ಎನ್. ಆರ್. ಹೆಗಡೆ, ಶ್ರೀ ಎಸ್. ಪಿ. ಭಟ್, ಶ್ರೀ ಆರ್. ಎನ್. ಕಾಮೇಶ್ವರ, ಶ್ರೀ ಎಮ್. ಎಸ್. ರಾವ್ ಹಾಗೂ ಶ್ರೀ ಎ. ಎಂ. ಸೂರ್ಯನಾರಾಯಣ ಇವರನ್ನು ಶ್ರೀಫಲ, ಪುಷ್ಪಗಳನ್ನಿತ್ತು ಗೌರವಿಸಲಾಯಿತು. ಸನ್ಮಾನಿತರಾದ ಗಣ್ಯರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು ಜೊತೆಗೆ ಹವ್ಯಕ ವೆಲ್ಫೇರ್ ಟ್ರಸ್ಟ್ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಲೆಂದು ಹಾರೈಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಪತ್ರ ಹಾಗೂ ಸ್ಕಾಲರ್ ಶಿಪ್ ವಿತರಣಾ ಕಾರ್ಯಕ್ರಮ ಕೂಡ ನಡೆಯಿತು. ಶುಚಿರುಚಿಯಾದ ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

## Meritorious Students felicitated during Durga Pooja

**10th Std.**

1) Kumari Shaivi Hegde
2) Kumar Vishwanath Bhat
3) Kumar Nishith Jambhulkar
4) Kumar Suhas Kashyap
5) Kumar Aajinkya Chandrashekhar
6) Kumari Prerana Hegde

**12th Std.**

1) Kumari Pranjali Hande
2) Kumari Niyati Bhat
3) Kumari Stuti Kalan
4) Kumari Bhoomi Hegde
5) Kumari Ishita Somayaji

**Graduation / Post Graduation / Engineering / Medicine / CA / CS / Ph.D.**

1) Kumar Aditya Hegde
2) Kumar Rajat Hegde
3) Kumar Akash Marigoli
4) Dr. Shailaja Hegde
5) Kumari Kavita Hegde
6) Dr. Mangalgouri G. Bhat
7) Dr. Prakash Hegde

Special Schlorship from Shri R. G. Bhat, Andheri (Halkar) for girl students in memory of his wife Smt. Snehal Bhat for top scorer in 10 th Std. Kumari Prerana Hegde, Top scorer in 12th (Science) Kumari Stuti Kalan.

## HAVYAKA WELFARE TRUST BANK A/C DETAILS

Due to the merger of Corporation Bank with the Union Bank of India we request the members to note the change in the bank details

**Union Bank of India, Santacruz (E), Mumbai Branch, Mumbai 400 029**


1) **Havyaka Welfare Trust**
**S.B. A/c No. 520101249405926**
**IFS Code : UBINO904996**

2) **Havyaka Welfare Trust Women Welfare Cell**
**S.B. A/c No. 520101249405962**
**IFS CODE : UBINO904996**

**Donations to 'Havyaka Welfare Trust' qualify for tax deduction under section 80 (G).**

*PAGE DONATED BY : **SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT***

## ‘ಸೃಜನಾ’ ಬಳಗದ ‘ಪ್ರವಾಸಿಗರ ಅಂತರಂಗ’ ಕೃತಿ ಬಿಡುಗಡೆ
## ಜ್ಞಾನದ ಅರಿವನ್ನು ವಿಸ್ತರಿಸಲು ಪ್ರವಾಸ ಹೆಚ್ಚು ಉಪಯುಕ್ತ – ಶ್ರೀನಿವಾಸ ಜೋಕಟ್ಟೆ




‘ಪ್ರವಾಸ ಎನ್ನುವುದು ವ್ಯಕ್ತಿಯ ಜೀವನದಲ್ಲಿ ಮತ್ತೊಂದು ಹೊಸ ಸಂಸ್ಕೃತಿಯನ್ನು ಪರಿಚಯಿಸಿಕೊಡುವಂಥದ್ದು. ಪ್ರವಾಸದಿಂದ ಪ್ರತ್ಯಕ್ಷ ಜ್ಞಾನ ದೊರೆಯುವುದು. ನಮ್ಮಲ್ಲಿದ್ದ ಅಹಂಕಾರ ಹೋಗಲಾಡಿಸಲು, ನಮ್ಮ ಮನಸ್ಸು ಅರಳುವಂತಾಗಲು ವರ್ಷಕ್ಕೊಂದು ಸಲವಾದರೂ ಪ್ರವಾಸ ಕೈಗೊಳ್ಳಬೇಕು. ಪ್ರವಾಸದಿಂದ ಸಿಗುವ ಉಲ್ಲಾಸ ಮತ್ತಾವುದರಲ್ಲೂ ದೊರೆಯದು. ಆ ಮೂಲಕ ನಮ್ಮ ಬದುಕಿನ ಜ್ಞಾನ, ಅರಿವನ್ನು ವಿಸ್ತರಿಸಿಕೊಳ್ಳಬೇಕು’ ಎಂದು ಕರ್ನಾಟಕ ಮಲ್ಲ ದಿನಪತ್ರಿಕೆಯ ಉಪ ಸಂಪಾದಕ, ಸಾಹಿತಿ, ಕವಿ ಶ್ರೀನಿವಾಸ ಜೋಕಟ್ಟೆ ಅವರು ಸೃಜನಾ ಬಳಗದ ಲೇಖಕಿಯರ ‘ಪ್ರವಾಸಿಗರ ಅಂತರಂಗ’ ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದರು. ‘ಸೃಜನಾ’ ಮುಂಬಯಿ ಕನ್ನಡ ಲೇಖಕಿಯರ ಬಳಗದ ಹತ್ತನೇ ಕೃತಿ ‘ಪ್ರವಾಸಿಗರ ಅಂತರಂಗ’ ಕೃತಿ ಲೋಕಾರ್ಪಣೆ ಕಾರ್ಯಕ್ರಮವು ಮಾಟುಂಗಾ ಪೂರ್ವದ ಮೈಸೂರು ಅಸೋಸಿಯೇಶನ್‌ನ ಮೊದಲ ಮಹಡಿಯ ಕಿರುಸಭಾಗೃಹದಲ್ಲಿ ಅ. 14ರ ಶನಿವಾರದಂದು ಸಂಜೆ 4.30ಕ್ಕೆ ಜರಗಿದ ಸಂದರ್ಭದಲ್ಲಿ ಅವರು ಮುಖ್ಯ ಅತಿಥಿಯಾಗಿ ಆಗಮಿಸಿ ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಅಂದಿನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೃಜನಾ ಮುಂಬಯಿ ಕನ್ನಡ ಲೇಖಕಿಯರ ಬಳಗದ ಸಂಚಾಲಕಿ ಪದ್ಮಜಾ ಮಣ್ಣೂರ ವಹಿಸಿಕೊಂಡಿದ್ದರು. ಅವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡುತ್ತಾ, ಒಂಭತ್ತು ಕೃತಿಗಳಿಂದ ಅಲಂಕಾರಗೊಂಡ ನಮ್ಮ ಸೃಜನಾಳಿಗೆ ಹತ್ತನೇ ಕೃತಿಯಿಂದ ಇನ್ನಷ್ಟು ಅಲಂಕಾರವಾಯಿತು. ಹತ್ತು ಹಲವು ಕಾರ್ಯಕ್ರಮಗಳನ್ನು ಏರ್ಪಡಿಸುತ್ತ ಬಂದಿರುವ ಸೃಜನಾ ಬಳಗ ಕಳೆದ 20 ವರ್ಷಗಳಿಂದ ಎಲ್ಲ ಸಹೃದಯರ ಸಹಕಾರದಿಂದ ನಡೆ ಮುಂದೆ ನಡೆ ಮುಂದೆ ಎಂಬಂತೆ ನಿರಂತರವಾಗಿ ನಡೆದು, ಜನಮೆಚ್ಚುಗೆ ಪಡೆದು ಬೆಳೆಯುತ್ತಿದೆ. ಸೃಜನಾ ಬಳಗ ಮುಂದೆಯೂ ಗಟ್ಟಿ ಹೆಜ್ಜೆ ಇಡಲು ನಿಮ್ಮೆಲ್ಲರ ನಿರಂತರ ಪ್ರೋತ್ಸಾಹ ದೊರೆಯಲಿ ಎಂದು ನುಡಿದರು. ಕಥೆಗಾರ, ಸಾಹಿತಿ, ಹಾಗೂ ರಂಗಕರ್ಮಿ ಗೋಪಾಲ್ ತ್ರಾಸಿ ಅವರು ಸೃಜನಾ ಬಳಗದ ಪ್ರವಾಸಿಗರ ಅಂತರಂಗ ಪ್ರವಾಸ ಕಥನದ ಕೃತಿ ಪರಿಚಯ ಮಾಡುತ್ತಾ, ಈ ಕೃತಿಯಲ್ಲಿ ದೇಶ ವಿದೇಶದ ಪ್ರವಾಸ, ಧಾರ್ಮಿಕ ಕ್ಷೇತ್ರ ದರ್ಶನವು ಇದೆ. ಕೆಲವರು ತಾವು ಅನುಭವಿಸಿದ್ದನ್ನು ಬರೆದುಕೊಂಡಿದ್ದಾರೆ. ಒಟ್ಟಿನಲ್ಲಿ ಸೃಜನಾ ಮುಂಬಯಿ ಕನ್ನಡ ಲೇಖಕಿಯರ ಬಳಗದ ಹಿರಿಯ ಕಿರಿಯರ ಪ್ರವಾಸ ಕಾಲದ ಚಿತ್ರಣ ಇಲ್ಲಿದೆ ಎಂದರು.

ಪ್ರವಾಸಿಗರ ಅಂತರಂಗದಲ್ಲಿ ಸಂಪಾದಕೀಯ ನುಡಿ ಬರೆದಿರುವ ನಾಲ್ವರು ಸಂಪಾದಕರಲ್ಲಿ ಒಬ್ಬರಾದ ಲತಾ ಸಂತೋಷ್ ಶೆಟ್ಟಿ ಮುದ್ದುಮನೆಯವರು, ಸೃಜನಾ ಬಳಗ ನಮ್ಮಲ್ಲಿ ಭರವಸೆ ಇರಿಸಿ ನೀಡಿದ ಸಂಪಾದಕೀಯದ ಜವಾಬ್ದಾರಿಯನ್ನು ಉತ್ತಮ ರೀತಿಯಲ್ಲಿ ನಿಭಾಯಿಸಲು ಪ್ರಯತ್ನಿಸಿದ್ದೇವೆ ಎಂದರು. ಕೃತಿ ಬಿಡುಗಡೆಯ ಕಾರ್ಯಕ್ರಮ ಸುಶೀಲ ದೇವಾಡಿಗರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ವೇದಿಕೆಯಲ್ಲಿ ಬಳಗದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಸರೋಜ ಅಮಾತಿಯವರು ಕಾರ್ಯಕ್ರಮವನ್ನು ನಿರೂಪಿಸಿದರು, ಲತಾ ಸಂತೋಷ್ ಶೆಟ್ಟಿ ಮುದ್ದುಮನೆ ಧನ್ಯವಾದಗಳನ್ನು ಅರ್ಪಿಸಿದರು.

## ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನ : ವಿಚಾರ ಸಂಕಿರಣ ‘ಋಷಿ ಪರಂಪರೆ ಹಾಗೂ ಸನಾತನ ಧರ್ಮ ಒಂದಕ್ಕೊಂದು ಪೂರಕ’ – ಜಿ. ಟಿ. ಆಚಾರ್ಯ



ಸ್ವಚ್ಛ ಸಮಾಜ, ಸುಂದರ ಬದುಕಿಗೆ ಅರ್ಥಪೂರ್ಣ ಚೌಕಟ್ಟು, ಭದ್ರ ಬುನಾದಿ ಹಾಕಿದವರೇ ಋಷಿಗಳು. ವಿಷಯ ಒಂದರ ಸತ್ಯಾಸತ್ಯತೆಗೆ ನಿರಂತರ ಅಧ್ಯಯನಶೀಲರಾಗಿ ಯಾವುದೇ ಫಲಾಪೇಕ್ಷೆ ಇಲ್ಲದೆ ಸಮಾಜದ ಒಳಿತನ್ನು ಬಯಸಿದ ಋಷಿಗಳ ಕುರಿತು ಇನ್ನಷ್ಟು ವಿಚಾರ ಸಂಕಿರಣಗಳು ನಡೆಯಬೇಕು.

ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನ ತನ್ನ ಇತಿಮಿತಿಯೊಳಗೆ ದೊಡ್ಡ ಪ್ರಯತ್ನ ಮಾಡಿದೆ. ಅಪರೂಪದ ಇಂತಹ ಕಾರ್ಯಕ್ರಮ ಅನುಕರಣೆಯ ಕಾರ್ಯಕ್ರಮ. ಸನಾತನ ಧರ್ಮಕ್ಕೆ ಭದ್ರ ಬುನಾದಿ ಹಾಕಿದ ಋಷಿ ಪರಂಪರೆಯ ಕುರಿತು ನಾವು ಎಷ್ಟು ತಿಳಿದುಕೊಂಡರೂ ಕಡಿಮೆಯೇ. ಜೀವನ ಧರ್ಮ ಏನು? ಯಾವುದು? ಮನುಷ್ಯ ಹೇಗೆ ಬದುಕಬೇಕು, ಅದಕ್ಕೆ ಚೌಕಟ್ಟು ಯಾವುದು ಎಂಬುದನ್ನು ಸಾವಿರಾರು ವರ್ಷಗಳ ಹಿಂದೆ ಋಷಿಮುನಿಗಳು ತಾವು ತಪಸ್ಸಿನ ಮೂಲಕ ಕಂಡುಕೊಂಡದ್ದನ್ನು ವಿಶ್ವಕ್ಕೆ ತಿಳಿಸಿದರು. ವೇದ, ಪುರಾಣ, ಉಪನಿಷತ್‌ಗಳನ್ನು ನಮಗೆ ನೀಡಿದವರು ಋಷಿಗಳು. ವ್ಯಾಸರಿಂದ ರಚಿತವಾದ ಮಹಾಭಾರತ, ಮಹರ್ಷಿ ವಾಲ್ಮೀಕಿಯಿಂದ ರಚಿತವಾದ ರಾಮಾಯಣ ಅಂದಿಗೂ ಇಂದಿಗೂ ಮುಂದೆಯೂ

ನಿತ್ಯನೂತನವಾಗಿರುತ್ತದೆ. ಈ ಎಲ್ಲ ಹಿನ್ನೆಲೆಯನ್ನು ಗಮನಿಸಿದಾಗ ಋಷಿ ಪರಂಪರೆ ಹಾಗೂ ಸನಾತನ ಧರ್ಮ ಒಂದಕ್ಕೊಂದು ಪೂರಕ ಎಂದು ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನ ದಿನಾಂಕ 01.10.23 ರವಿವಾರ ಸಾಯಂಕಾಲ ಕನ್ನಡ ವೆಲ್ಫೇರ್ ಸೊಸಾಯಿಟಿ ಸಭಾಗೃಹದಲ್ಲಿ ಹಮ್ಮಿಕೊಂಡ 'ಋಷಿ ಪರಂಪರೆ ಹಾಗೂ ಸನಾತನ ಧರ್ಮ" ವಿಚಾರ ಸಂಕಿರಣದ ಸಭಾಧ್ಯಕ್ಷತೆ ಸ್ಥಾನದಿಂದ ಅಧ್ಯಕ್ಷೀಯ ಭಾಷಣದಲ್ಲಿ ಜಿ. ಟಿ. ಆಚಾರ್ಯ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಯುವ ಚಿಂತಕ, ವಾಗ್ಮಿ ವಿದ್ವಾನ್ ಸಂತೋಷ್ ಭಟ್ ಬಕ್ರೆಮಠ ತಮ್ಮ ವಿಚಾರ ಮಂಡಿಸುತ್ತ, ಸನಾತನ ಎನ್ನುವ ಶಬ್ದ ತುಂಬ ಪ್ರಾಚೀನ ವಾದದ್ದು. ವೇದ ಹಾಗೂ ಋಷಿ ಚಿಂತನೆಗಳನ್ನು ತಿಳಿದುಕೊಳ್ಳುವಲ್ಲಿ ನಾವು ಸೋತಿರುವೆವು. ಋಷಿಗಳು ತಾವು ಏನನ್ನು ಹೇಳಿದರೋ ಅದು ತನ್ನಿಂದಲೇ ಆಯಿತು ಎಂದು ಅದರ ಪೇಟೆಂಟ್ ತೆಗೆದುಕೊಳ್ಳುವ ಕಾರ್ಯಕ್ಕೆ ಮುಂದಾಗಲಿಲ್ಲ. ಕಾರಣ ತಾವು ಹೇಳಿದ್ದು ಪ್ರಕೃತಿಯಲ್ಲಿ ಇದ್ದದ್ದನ್ನೇ ತಾನೇ. ಅದು ಒಬ್ಬರ ಸ್ವತ್ತಾಗಬಾರದೆಂಬ ದೂರದೃಷ್ಟಿ ಹಾಗೂ ಅವರ ನಿಸ್ವಾರ್ಥ ಭಾವ ನಿತ್ಯನೂತನ ಎಂದರು.

ಇನ್ನೋರ್ವ ಅಭ್ಯಾಗತರಾದ ಶ್ರೀಮತಿ ಅಮಿತಾ ಭಾಗವತ ಯುವ ಜನತೆಗೆ ಇಂಥ ವಿಷಯಗಳನ್ನು ಮನದಟ್ಟು ಮಾಡುವ ಅವಶ್ಯವಿದೆ. ಋಷಿಗಳ ನಿಸ್ವಾರ್ಥ ಸಾಧನೆಯೇ ಸನಾತನ ಧರ್ಮದ ಪಂಚಾಂಗ. ಅದನ್ನು ಮರೆಯದೆ ಪುನಃ ಪುನಃ ಮನನ ಮಾಡುವುದು ಅವರಿಗೆ ಕೊಡುವ ಗೌರವ. ಆ ದಾರಿ ಸದಾ ನಮ್ಮದಾಗಲಿ. ಹೊಸತರೊಂದಿಗೆ ನಮ್ಮ ಹಿರಿಯರ ಸತ್ ಚಿಂತನೆಯನ್ನು ಸದಾ ಮೆಲುಕು ಹಾಕುವುದು ನಮ್ಮ ಕರ್ತವ್ಯ ಎಂದರು.

ಪ್ರವಾಸಿ ಹಾಗೂ ಇತಿಹಾಸ ಲೇಖಕ ಶ್ರೀ ಆಗುಂಬೆ ಎಸ್. ನಟರಾಜ್ 'ಪ್ರಜ್ಞೆ ಹಾಗೂ ಜವಾಬ್ದಾರಿ' ಕುರಿತು ತಿಳಿಸಿದರು. ಅದು 'ಮಾತೃಭಾಷಾ ಪ್ರಜ್ಞೆ' ಇರಬಹುದು ಹಾಗೂ 'ಜವಾಬ್ದಾರಿಯ ಪ್ರಜ್ಞೆ' ಇರಬಹುದು. ಆ ಕುರಿತು ನಾವು ಜಾಗೃತರಾಗಿರಬೇಕು. ಜವಾಬ್ದಾರಿ ಇಲ್ಲದ ಸ್ವಾತಂತ್ರ್ಯ ತಪ್ಪುದಾರಿಗೆ ಕೊಂಡೊಯ್ಯುತ್ತದೆ. ದೇಶ ಸಮೃದ್ಧವಾಗಿರಬೇಕಾದರೆ ಸಾಮಾಜಿಕ ಪ್ರಜ್ಞೆ ಹಾಗೂ ಜವಾಬ್ದಾರಿ ಅವಶ್ಯ. ಇಂತಹ ವಿಚಾರ ಸಂಕಿರಣಗಳು ಆಗಾಗ ಅಲ್ಲಲ್ಲಿ ನಡೆಯುವಂತಾಗಲಿ ಎನ್ನುತ್ತಾ ಕಾರ್ಯಕ್ರಮ ಸಂಘಟಿಸಿರುವ ಎರಡೂ ಸಂಸ್ಥೆಗಳನ್ನು ಅಭಿನಂದಿಸಿದರು.

ಪ್ರತಿಷ್ಠಾನದ ಸಂಸ್ಥಾಪಕ ಹಾಗೂ ಕಾರ್ಯದರ್ಶಿ ವಿಶ್ವನಾಥ ದೊಡ್ಮನೆ ಇಂತಹ ಕಾರ್ಯಕ್ರಮ ನಡೆಸಲು ಪ್ರೇರಣೆ ನೀಡಿದ ಆಗುಂಬೆ ನಟರಾಜ್ ಅವರ 'ಪ್ರವಾಸಿ ಹಾಗೂ ಇತಿಹಾಸ' ಕೃತಿಗಳ ಕುರಿತು ತಿಳಿಸಿದರು.

ಶ್ರೀಮತಿ ಲಲಿತಾ ಪ್ರಭು ಅಂಗಡಿ ಅವರು ಆಗುಂಬೆ ನಟರಾಜ್ ಅವರ 'ಗಾಂಧೀಜಿ ಜಾಡಿನಲ್ಲಿ ನೌಖಾಲಿಗೊಂದು ಮರು ಯಾತ್ರೆ' ಕೃತಿಯ ವಿಶೇಷತೆಗಳನ್ನು ಪರಿಚಯಿಸಿದರು.

ಇದೇ ಶುಭಾವಸರದಲ್ಲಿ ಹಿರಿಯ ಸಾಮಾಜಿಕ ಹಾಗೂ ಧಾರ್ಮಿಕ ಮುಂದಾಳು ಶಿವಾಜಿ ನಗರದ ಶ್ರೀ ರಮೇಶ ಪೂವಪ್ಪ ಹಾಗೂ ಶ್ರೀಮತಿ ರೋಹಿಣಿ ದಂಪತಿಯನ್ನು ಪ್ರತಿಷ್ಠಾನದ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದ ಪ್ರಾರಂಭದಲ್ಲಿ ಶ್ರೀ ಅರವಿಂದ ಇಟಗಿ, ಶ್ರೀಮತಿ ಶಾಂತಲಕ್ಷ್ಮೀ ಉಡುಪ ಸಂಗಡಿಗರಿಂದ ಹಾಗೂ ಶ್ರೀಮತಿ ಮಾಲತಿ ಮತ್ತು ಸಂಗಡಿಗರಿಂದ ಗೀತ ಗಾಯನ ನಡೆಯಿತು.

ಶ್ರೀಮತಿ ವೀಣಾ ಶೆಟ್ಟಿಯವರ ಪ್ರಾರ್ಥನೆಯೊಂದಿಗೆ ಅಭ್ಯಾಗತರು ದೀಪ ಬೆಳಗಿಸುವುದರೊಂದಿಗೆ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಶ್ರೀ ಸುರೇಶ ಶೆಟ್ಟಿ ಕಣಂಜಾರು ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

## ಎಂಇಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ತ್ರೈಮಾಸಿಕ ಇ-ವಾರ್ತಾಪತ್ರ ಬಿಡುಗಡೆ

ಅನೇಕ ಅಂಗ ಶಿಕ್ಷಣ ಸಂಸ್ಥೆಗಳನ್ನು ಹೊಂದಿದ ಎಂಇಎಸ್ ಸಂಸ್ಥೆಗೆ ಸಂಪರ್ಕ ಸಾಧನವಾಗಿ ದ್ವಿಭಾಷಾ ತ್ರೈಮಾಸಿಕ ಪತ್ರಿಕೆಯನ್ನು ತರಲು ಉದ್ದೇಶಿಸಿದ್ದು. ಪ್ರಥಮ ಸಂಚಿಕೆಯನ್ನು (ಜುಲೈ-ಸಪ್ಟೆಂಬರ್ 2023) ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜಿ. ಎಂ. ಹೆಗಡೆ ಮುಳಖಂಡ ಇವರು ತಾ. 16-10-2023 ರಂದು ಬಿಡುಗಡೆಗೊಳಿಸಿದರು. ಈ ಪತ್ರಿಕೆಯು ಸಂಸ್ಥೆಯ ಆಡಳಿತ ಮಂಡಳಿ. ಭೋಧಕ-ಭೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಮತ್ತು ಹಳೆ ವಿದ್ಯಾರ್ಥಿಗಳ ನಡುವೆ ಮಧುರ ಬಾಂಧವ್ಯವನ್ನು ಬೆಸೆಯುವ ಮಾಧ್ಯಮವಾಗಿ ಹೊರಹೊಮ್ಮಿದೆ. ಈ ಪತ್ರಿಕೆಯು ಅಂತರ್ಜಾಲದಲ್ಲಿ (http://messirsi.org/newsletters.html) ಜಗತ್ತಿನ ಎಲ್ಲಾ ಮೂಲೆಯಲ್ಲಿ ಇರುವ ಹಳೆ ವಿದ್ಯಾರ್ಥಿಗಳಿಗೆ ಉಚಿತವಾಗಿ ತಲುಪಲಿದೆ. ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡೆಗಳಲ್ಲಿ ವಿದ್ಯಾರ್ಥಿಗಳ ಸಾಧನೆ, ಕಳೆದ ಆರು ದಶಕಗಳಲ್ಲಿ ಎಂಇಎಸ್ ನಡೆದು ಬಂದ ದಾರಿ, ಮುಂದಿನ ಯೋಜನೆಗಳು ಮೊದಲಾದ ಉಪಯುಕ್ತ ಮಾಹಿತಿಗಳನ್ನು ಒಳಗೊಂಡಿರುತ್ತದೆ.

## 'ಇತ್ತೀಚಿನ ಲೇಖಕರಲ್ಲಿ ಸಹಜ ಸಂವೇದನೆಗಳತ್ತ ಒಲವು ತೋರುವ ಪ್ರವೃತ್ತಿ ಹೆಚ್ಚಾಗುತ್ತಿದೆ' - ಮಿತ್ರಾ ವೆಂಕಟ್ರಾಜ್

ಮುಂಬಯಿಯಿಂದ ಹೊಸ ಕಾದಂಬರಿ ಬರುವುದೆಂದರೆ ಮುಂಬಯಿಗರಿಗೆಲ್ಲ ಸಂತಸದ ವಿಷಯ. ಇತ್ತೀಚಿನ ದಿನಗಳಲ್ಲಿ ಲೇಖಕರು ಸಹಜ ಸಂವೇದನೆಗಳತ್ತ ಒಲವು ತೋರಿಸುವ ಪ್ರವೃತ್ತಿ ಹೆಚ್ಚು ಹೆಚ್ಚಾಗಿ ಕಂಡುಬರುತ್ತಿದೆ. ಇದೊಂದು ಸ್ವಾಗತಾರ್ಹ ವಿಚಾರ. ಅಮಿತಾ ಭಾಗವತ್ ಅವರ ಕಾದಂಬರಿಯು ಸ್ತ್ರೀ ಕೇಂದ್ರೀತವಾಗಿದ್ದು, ಇಲ್ಲಿಯ ನಾಯಕಿಯ ಬದುಕಿನ ಏಳು ಬೀಳುಗಳನ್ನು, ಅವಳ ಮನಸ್ಸಿನ ಹೊಯ್ದಾಟಗಳನ್ನು ಹೇಳುವ ಕತೆಯೇ ನೀಲಿ ನಕ್ಷೆ ಎಂದು ಕತೆಗಾರರು, ಕಾದಂಬರಿಕಾರರು ಆದ ಮಿತ್ರಾ ವೆಂಕಟ್ರಾಜ್ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ ಮತ್ತು ಮೈಸೂರು ಅಸೋಸಿಯೇಷನ್ ಇವರ ಸಂಯುಕ್ತ ಆಯೋಜನೆಯಲ್ಲಿ ಅಕ್ಟೋಬರ್ 7ರಂದು ಮೈಸೂರು ಅಸೋಸಿಯೇಶನ್‌ನ ಸಭಾಗೃಹದಲ್ಲಿ ನಡೆದ ಅಮಿತಾ ಭಾಗವತ್ ಅವರ ನೀಲಿ ನಕ್ಷೆ ಕಾದಂಬರಿಯನ್ನು ಲೋಕಾರ್ಪಣೆಗೊಳಿಸಿದ ಸಂದರ್ಭದಲ್ಲಿ ಮಾತನಾಡುತ್ತಾ, ಮುಂಬಯಿ ಕಾದಂಬರಿಕಾರರ ಸಾಲಿಗೆ ಸೇರಿದ ಅಮಿತಾ ಭಾಗವತ್ ಅವರನ್ನು ಅಭಿನಂದಿಸಿದರು.

ಅಮಿತಾ ಭಾಗವತ್ ಅವರ ಪ್ರಥಮ ಕಾದಂಬರಿಯಾದ ನೀಲಿ ನಕ್ಷೆ ಸಶಕ್ತ ಕಾದಂಬರಿಯಾಗಿದ್ದು, ಕಾರವಾರದ ಹಾಗೂ ಮುಂಬಯಿಯ

*PAGE DONATED BY :* ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

ಜೀವನವನ್ನು ಪ್ರತಿಫಲಿಸುತ್ತದೆ. ಮಹಿಳೆಯರ ಜೀವನದ ಸ್ಥಿತ್ಯಂತರವನ್ನು ಬಿಂಬಿಸುವ ಈ ಕಾದಂಬರಿಯು ಆತ್ಮಶಕ್ತಿಯುಳ್ಳ ಮಹಿಳೆಯು ತನ್ನ ಸಂಕಲ್ಪ ಶಕ್ತಿಯಿಂದ ಸುತ್ತಮುತ್ತಲಿನ ಆವರಣದಲ್ಲಿ ಸಕಾರಾತ್ಮಕ ಬೆಳವಣಿಗೆಯನ್ನು ತರಬಲ್ಲಳು ಎನ್ನುವುದನ್ನು ತೋರಿಸುತ್ತದೆ. ಎಲ್ಲ ಪಾತ್ರಗಳ ಮನೋವಿಶ್ಲೇಷಣೆಯೊಂದಿಗೆ, ಅವುಗಳ ಆಂತರಿಕ ಬೆಳವಣಿಗೆಯೂ ಪ್ರಮುಖ ಪಾತ್ರ ವಹಿಸುತ್ತದೆ. ಎಲ್ಲಾ ಕತೆಗಳೂ ನಮ್ಮ ಜೀವನದಿಂದ ಹುಟ್ಟುತ್ತವೆ. ಆದರೆ ಅವುಗಳನ್ನು ಪೋಣಿಸಿ ಕತೆಯ ಹಂದರವನ್ನಾಗಿಸುವುದು ಲೇಖಕರ ಕ್ರಿಯಾಶೀಲತೆಯನ್ನು ಅವಲಂಭಿಸಿರುತ್ತದೆ. ಕಲಾತ್ಮಕವಾಗಿ ಕತೆಯನ್ನು ನಿರೂಪಿಸುವ ಶೈಲಿ ಅಮಿತಾ ಭಾಗವತ್ ಅವರಿಗೆ ಒಲಿದಿದೆ ಎಂದು ನೀಲಿನಕ್ಷೆ ಕಾದಂಬರಿ ಬಿಡುಗಡೆ ಸಮಾರಂಭದ ಅಧ್ಯಕ್ಷರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥರು, ಪ್ರಾಧ್ಯಾಪಕರು ಆದ ಡಾ. ಜಿ. ಎನ್. ಉಪಾಧ್ಯ ಅವರು ನುಡಿದರು. ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳ ಮೊದಲಾದ ಕಾದಂಬರಿಕಾರರ ನಂತರ ಹೊಸ ಪರಂಪರೆಯ ಪ್ರತೀಕವಾಗಿ ಅಮಿತಾ ಅವರು ತಲೆಯೆತ್ತಿ ನಿಂತಿದ್ದಾರೆ. ಹೊಸ ತಲೆಮಾರಿನ ಲೇಖಕರಿಗೆ ಅವರು ಸ್ಪೂರ್ತಿಯಾಗಿದ್ದಾರೆ ಎನ್ನುವುದು ಸಂತಸದ ವಿಷಯ ಎಂದು ಡಾ. ಉಪಾಧ್ಯ ಅವರು ಅಮಿತಾ ಭಾಗವತ್ ಅವರ ಸಾಧನೆಯನ್ನು ಪ್ರಶಂಸಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಮೈಸೂರು ಅಸೋಸಿಯೇಶನ್‌ನ ಉಪಾಧ್ಯಕ್ಷರಾದ ಉಮೇಶ್ ಮಾಸ್ಕೇರಿಯವರು ಮರೆಯಾಗುತ್ತಿರುವ ಕನ್ನಡ ಮಾಧ್ಯಮ ಶಾಲೆಗಳ ಬಗೆಗೆ ಬೇಸರ ವ್ಯಕ್ತಪಡಿಸುತ್ತಾ, ಕನ್ನಡಿಗರಾದ ನಾವು ಕನ್ನಡವನ್ನು ಉಳಿಸಿ ಬೆಳೆಸಿಕೊಂಡು ಹೋಗುವುದರಲ್ಲಿ ಕಾಳಜಿ ವಹಿಸಬೇಕೆಂದರು. ಅಲ್ಲದೇ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎನ್. ಉಪಾಧ್ಯ ಅವರ ಕನ್ನಡ ಪರ ಕಾರ್ಯಕಲಾಪಗಳನ್ನು ಶ್ಲಾಘಿಸಿದರು. ಕೃತಿಕಾರರಾದ ಅಮಿತಾ ಭಾಗವತ್ ತನ್ನ ಸಾಹಿತ್ಯ ಪ್ರೀತಿ ಬೆಳೆಸಿದ ಮುಂಬಯಿಯಲ್ಲಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎನ್. ಉಪಾಧ್ಯ ಅವರ ಅಧ್ಯಕ್ಷತೆಯಲ್ಲಿ, ಸಾಹಿತಿ ಮಿತ್ರಾ ವೆಂಕಟ್ರಾಜ್ ಅವರಿಂದ ನನ್ನ ಕಾದಂಬರಿ ಬಿಡುಗಡೆಯಾಗಿದ್ದು ತುಂಬಾ ಸಂತಸವನ್ನು ಉಂಟು ಮಾಡಿದೆ. ಸಾಹಿತ್ಯವು ಕಾಲ ದೇಶಗಳ ಬಂಧನಗಳಿಂದ ನಮ್ಮನ್ನು ಮುಕ್ತಗೊಳಿಸುವಂತದ್ದು, ಅಷ್ಟೇ ಅಲ್ಲ, ನಮ್ಮ ಜೀವನದ ನೋಟವನ್ನು ವಿಶಾಲಗೊಳಿಸುವಂತದ್ದು. ಜೀವನದಲ್ಲಿ ಸಂತೋಷದ ಹುಡುಕಾಟದಲ್ಲಿ ನವನೀತದಂತೆ ಉಕ್ಕಿದ ಸಾಹಿತ್ಯವು ಜೀವನವನ್ನು ಪ್ರತಿಫಲಿಸುತ್ತದೆ. ಇಂತಹುದೇ ಪ್ರಯತ್ನವನ್ನು ನಾನು ನೀಲಿನಕ್ಷೆ ಕಾದಂಬರಿಯಲ್ಲಿ ಮಾಡಿದ್ದೇನೆ ಎಂದು ಹೇಳಿ ಅವರು ಕಾದಂಬರಿ ಬರೆಯಲು ಸ್ಪೂರ್ತಿಯಾದ ಹಾಗೂ ನೆರವಾದ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು.

ಹವ್ಯಕ ವೆಲ್ಫೇರ್ ಟ್ರಸ್ಟಿನ ಕಾರ್ಯದರ್ಶಿ ವಸಂತ್ ಭಟ್ ಅಮಿತಾ ಭಾಗವತ್ ಅವರ ಸಾಹಿತ್ಯಿಕ, ಸಾಂಘಿಕ ಚಟುವಟಿಕೆಗಳನ್ನು ವಿವರಿಸಿದರು. ಕೃತಿಕಾರರನ್ನು ಕನ್ನಡ ವಿಭಾಗ ಮತ್ತು ಹವ್ಯಕ ಸಂಸ್ಥೆಯ ವತಿಯಿಂದ ಗೌರವಿಸಲಾಯಿತು. ವಿಭಾಗದ ಸಂಶೋಧನ ವಿದ್ಯಾರ್ಥಿ ಕಲಾ ಭಾಗ್ವತ್ ಅವರು ವಿಶ್ಲೇಷಣಾತ್ಮಕವಾಗಿ ಕೃತಿಯನ್ನು ಪರಿಚಯಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ಇದೊಂದು ಮಹತ್ವದ ಕೊಡುಗೆಯಾಗಿದೆ ಎಂದು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಕಂಠದಾನ ಕಲಾವಿದರಾದ ಮೋಹನ್ ಮಾರ್ನಾಡ್ ಅವರು ತಮ್ಮ ಮನತಟ್ಟಿದ ಕಾದಂಬರಿ ಇದೆಂದು ಮೆಚ್ಚುಗೆಯ ನುಡಿಗಳನ್ನಾಡಿ, ಕಾದಂಬರಿಯ ಕುರಿತಾದ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ವಿಭಾಗದ ಸಂಶೋಧನಾ ವಿದ್ಯಾರ್ಥಿ ನಳಿನಾ ಪ್ರಸಾದ್ ಅವರು ಕಾದಂಬರಿಯ ಆಯ್ದ ಭಾಗವನ್ನು ವಾಚಿಸಿದರು. ಹವ್ಯಕ ವೆಲ್ಫೇರ್ ಟ್ರಸ್ಟ್‌ನ ಅಧ್ಯಕ್ಷರಾದ ಶಿವಕುಮಾರ್ ಭಾಗವತ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾವ್ಯ ಭಾಗವತ್ ಅವರ ಪ್ರಾರ್ಥನೆಯೊಂದಿಗೆ ಆರಂಭಗೊಂಡ ಈ ಕೃತಿ ಬಿಡುಗಡೆ ಕಾರ್ಯಕ್ರಮದ ನಿರೂಪಣೆಯನ್ನು ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಶೆಟ್ಟಿಯವರು ನಿರ್ವಹಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಸಂಗೀತ ರಸಮಂಜರಿ ಕಾರ್ಯಕ್ರಮದಲ್ಲಿ ಅಪರ್ಣಾ ಭಟ್, ಜ್ಯೋತಿ ಭಟ್, ಸೀಮಾ ಹೆಗಡೆ, ಚಂದ್ರಶೇಖರ್ ಜೋಶಿ, ಸುಕನ್ಯಾ ರವೀಂದ್ರ, ಕಾವ್ಯ ಭಾಗವತ್, ಕಲಾ ಭಾಗವತ್, ಹೇಮಾ ಹೆಗಡೆ, ಅಮೃತಾ ಹೆಗಡೆ ಮತ್ತು ಪೂರ್ಣಿಮಾ ಅಕದಾಸ್ ಇವರು ಭಕ್ತಿ, ಭಾವ, ಜಾನಪದ ಗೀತೆಗಳನ್ನು ಪ್ರಸ್ತುತಪಡಿಸಿದರು. ಸತೀಶ್ ಹೆಗಡೆಯವರು ತಬಲಾದಲ್ಲಿ ಹಾಗೂ ರೋಹಿತಾಕ್ಷ ಶೆಟ್ಟಿ, ಅಭಯ್ ಹೆಗಡೆ ಇವರು ಹಾರ್ಮೋನಿಯಂ ಸಾಥ್ ನೀಡಿದರು. ರೂಪಾ ಭಟ್ ಮತ್ತು ಶಶಿಕಲಾ ಹೆಗಡೆ ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆ ಮಾಡಿದರು.

## ಡಾ. ವಿಶ್ವನಾಥ ಕಾರ್ನಾಡ್ ಪ್ರತಿಷ್ಠಾನ ಮುಂಬಯಿ ವಿಕಾಸ ಪುಸ್ತಕ ಬಹುಮಾನ : ಶ್ಯಾಮಲಾ, ದಿನೇಶ್, ಅಮಿತಾ ಅವರ ಕೃತಿಗಳು ಆಯ್ಕೆ

ಹಿರಿಯ ಸಾಹಿತಿ, ಲೇಖಕ, ಪ್ರಾಧ್ಯಾಪಕ ವಿಶ್ವನಾಥ ಕಾರ್ನಾಡ್ ಅವರ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಿರುವ ಡಾ. ವಿಶ್ವನಾಥ ಕಾರ್ನಾಡ್ ಪ್ರತಿಷ್ಠಾನವು ಮುಂಬಯಿಯಲ್ಲಿ ಕನ್ನಡ ಪುಸ್ತಕ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಪುಸ್ತಕ ಬಹುಮಾನ ಯೋಜನೆ ರೂಪಿಸಿದ್ದು, 2022-23ರ ಸಾಲಿನ ವಿಕಾಸ ಪುಸ್ತಕ ಬಹುಮಾನಕ್ಕೆ ಡಾ. ಶ್ಯಾಮಲಾ ಪ್ರಕಾಶ್, ಡಾ. ದಿನೇಶ್ ಶೆಟ್ಟಿ ರೆಂಜಾಳ ಹಾಗೂ ಅಮಿತಾ ಭಾಗ್ವತ್ ಅವರ ಕೃತಿಗಳು ಆಯ್ಕೆಯಾಗಿವೆ.

ಇತ್ತೀಚೆಗೆ ಕಾರ್ನಾಡ್ ಪ್ರತಿಷ್ಠಾನದ ಅಧ್ಯಕ್ಷ ಡಾ. ಜಿ.ಎನ್. ಉಪಾಧ್ಯ ಅವರ ನೇತೃತ್ವದಲ್ಲಿ ನಡೆದ ಆಯ್ಕೆ ಸಮಿತಿಯ ಸಭೆಯಲ್ಲಿ ಸರ್ವಾನುಮತದಿಂದ ಈ ಕೃತಿಗಳನ್ನು ಆಯ್ಕೆ ಮಾಡಲಾಗಿದ್ದು, ಪ್ರತಿಷ್ಠಾನದ ಪರವಾಗಿ ಡಾ. ವಿಶ್ವನಾಥ ಕಾರ್ನಾಡ್ ಸಲಹೆ-ಸೂಚನೆಗಳನ್ನು ನೀಡಿದರು.

ಡಾ. ಶ್ಯಾಮಲಾ ಪ್ರಕಾಶ್ ಅವರ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಗೀತದ ಸಾಹಚರ್ಯ ಮತ್ತು ಡಾ. ದಿನೇಶ್ ಶೆಟ್ಟಿ ಅವರ ಮುಂಬಯಿ ಕನ್ನಡ ಪತ್ರಿಕೋದ್ಯಮ ಸಂಶೋಧನ ಕೃತಿಗಳು ಹಾಗೂ ಅಮಿತಾ ಭಾಗ್ವತ್ ಅವರ ನೀಲಿನಕ್ಷೆ ಕಾದಂಬರಿ ಈ ಬಾರಿಯ ಬಹುಮಾನಕ್ಕೆ ಆಯ್ಕೆಯಾಗಿವೆ ಎಂಬುದಾಗಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಪೂರ್ಣಿಮಾ ಎಸ್. ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಬಹುಮಾನ ನಗದು ಪುರಸ್ಕಾರ, ಪ್ರಶಸ್ತಿಪತ್ರ ಹಾಗೂ ಗ್ರಂಥ ಗೌರವವನ್ನು ಒಳಗೊಂಡಿದ್ದು, ಡಿ. 23ರಂದು ಅಂಧೇರಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಬಹುಮಾನ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

*PAGE DONATED BY : **SHRI A. K. BHAT, CHITRIGI & FAMILY***

## ನಿಧನ ವಾರ್ತೆ



**ಆದರ್ಶ ವ್ಯಕ್ತಿ ತೆಕ್ಕೆಕೆರೆ ನಾರಾಯಣ** ಇವರು 24.9.1945 ಕಾರಡ್ಕ ಗ್ರಾಮ ತೆಕ್ಕೆಕೆರೆ ದಿವಂಗತ ಸುಬ್ಬಣ್ಣ ಭಟ್ಟರು ಹಾಗೂ ಸುಶೀಲಮ್ಮರ ಎರಡನೇ ಮಗನಾಗಿ ಜನಿಸಿದರು. ಸುರತ್ಕಲ್ ಪ್ರತಿಷ್ಠಿತ ಕೆಆರ್‌ಇಸಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ, ಹಡಗಿಗೆ ಸಂಬಂಧದ ತರಬೇತಿ ಪಡೆದು ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದಲ್ಲಿ ಅಭಿಯಂತರಾಗಿ ಮತ್ತು ಮುಖ್ಯ ಅಭಿಯಂತರಾಗಿ ಹಲವಾರು ದೇಶಗಳನ್ನು ಸುತ್ತುತ್ತಾ ಸೇವೆ ಸಲ್ಲಿಸಿದರು. ಇವರು ನಲವತ್ತು ವರ್ಷ ಮುಂಬೈಯಲ್ಲಿದ್ದಾಗ ಹವ್ಯಕ ಆಡಳಿತ ಮಂಡಳಿಯಲ್ಲಿ ಸಕ್ರಿಯರಾಗಿ ತುಂಬಾ ಸೇವೆ ಸಲ್ಲಿಸಿದ್ದರು. ಮುಂಬೈಯ ಧಾರಾವಿ ಮೆಡಿಕಲ್ ಸೆಂಟರ್‌ನಲ್ಲಿ ಸೇವೆ, ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸಕ್ಕೆ ನೆರವು, ಹೀಗೆ ಹಲವು ವಿಧಗಳಲ್ಲಿ ಸಮಾಜ ಸೇವೆ ಸಲ್ಲಿಸಿದವರು. ನಿವೃತ್ತಿಯ ನಂತರ ಮಂಗಳೂರಿನ ಕೊಟ್ಟಾರದಲ್ಲಿ ನೆಲೆಸಿದ ಇವರು ಧ್ಯಾನ, ಯೋಗ, ಬರವಣಿಗೆಯಲ್ಲಿ ತೊಡಗಿಕೊಂಡಿದ್ದರು. ಇವರಿಗೆ ಹವ್ಯಕ ಸುವರ್ಣ ಮಹೋತ್ಸವದಲ್ಲಿ ಹವ್ಯಕ ಸಾಧಕ ರತ್ನ ಪ್ರಶಸ್ತಿ ದೊರೆತಿದೆ. 14.4.2023 ರಂದು ಇವರು ಬರೆದ 'ನಾ ನಡೆದು ಬಂದ ದಾರಿ' ಆತ್ಮಚರಿತ್ರೆ ಬಿಡುಗಡೆ ಕಾರ್ಯಕ್ರಮ ನಡೆಯಿತು. ಇವರು ಶ್ರೀರಾಮಚಂದ್ರಪುರ ಮಠದ ಶಿಷ್ಯರು. ಪ್ರತಿವರ್ಷ ವಿಶ್ವಕಡಲದಿನ ಮಂಗಳೂರು ಆಕಾಶವಾಣಿಯಲ್ಲಿ ಹಡಗಿಗೆ ಸಂಬಂಧಪಟ್ಟ ಉಪನ್ಯಾಸ ಕೊಡುತ್ತಿದ್ದರು. ಇವರು 24-8-2023 ರಂದು ತಮ್ಮ ಸ್ವಗೃಹದಲ್ಲಿ ದೈವಾಧೀನರಾದರು. ಪತ್ನಿ ಸುಮಲತಾ, ಮಕ್ಕಳು ದಿವ್ಯಾ, ಕಾವ್ಯ, ಅಳಿಯಂದಿರು, ನಾಲ್ವರು ಮೊಮ್ಮಕ್ಕಳು ಹಾಗೂ ಅಪಾರ ಬಂಧುಬಳಗವನ್ನು ಆಗಲಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥನೆ.



Aparna Bhat was felicitated by " Kala Saurabha " on 8th October 2023



Lalita Sahasranama & Bhajan at Dombivli Medical Centre



Kala Bhagwat was felicitated in Dusseehra Kavighosti at Mysore on 18th October 2023



Novel "Neeli Nakshe" released at Mumbai on 7th October 2023





**'Havyaka Sandesha' November 2023**

RNI NO. MAHBIL / 2000 / 746,
Postal Registration No. MCN/161/2021-2023
WPP License No. MR / Tech / WPP-130 / North / 2021-2023
'Licence to post without prepayment'

***Posted at Mumbai Patrika Channel Stg. Office Mumbai - 400 001***
**Date of Publication : 1st of every month**

**REGISTERED NEWSPAPER**

**Date of Posting :**
**2nd, 3rd of every month**

***If undelivered, please return to :***
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098.
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**To,**

Novel "Neeli Nakshe" released at Mumbai on 7th October 2023











